2017 ಕ.ತೀ.ವ 750

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್. ಕುಮಾರ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೆ ಗೌಡ

### ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ –ವಿರುದ್ಧ– ಇಂಡಿಯನ್ ಬ್ಯಾಂಕ್, ಬೆಂಗಳೂರು ಮತ್ತು ಇನ್ನೊಬ್ಬರು*

ಸಿವಿಲ್ ಪ್ರಕ್ರಿಯಾ ಸಂಹಿತೆ, 1908, (1976 ರ ಅಧಿನಿಯಮ ಸಂಖ್ಯೆ. 104), 3 ನೇ ನಿಯಮ 23 ನೇ ಆದೇಶ – ದಾವೆಯ ರಾಜಿ – 3 ನೇ ನಿಯಮದ ಆದೇಶದ ಉಪಬಂಧಗಳನ್ನು ಅನ್ವಯಿಸಲು ಪೂರೈಸಬೇಕಾದ ಷರತ್ತುಗಳು – ಕಾನೂನು ಬದ್ಧವಾದ ಒಪ್ಪಂದ ಅಥವಾ ರಾಜಿ ಇರತಕ್ಕದ್ದು. ಈ ರಾಜಿ ಲಿಖಿತರೂಪದಲ್ಲಿರಬೇಕು ಮತ್ತು ಪಕ್ಷಕಾರರ ಸಹಿಯನ್ನು ಹೊಂದಿರಬೇಕು. ಈ ರಾಜಿಯನ್ನು ನ್ಯಾಯಾಲಯವು ದಾಖಲಿಸಬೇಕು. ಪಕ್ಷಕಾರರು ಪತ್ರಕ್ಕೆ ಸಹಿ ಮಾಡುವ ಅಗತ್ಯವಿಲ್ಲದ ಸಂದರ್ಭದಲ್ಲಿ, ವಸ್ತು ವಿಷಯದ ಸಂಪೂರ್ಣ ಅಥವಾ ಯಾವುದೇ ಭಾಗದ ಸಂಬಂಧದಲ್ಲಿ ಪ್ರತಿವಾದಿಯು ವಾದಿಗೆ ಮನವರಿಕೆ ಮಾಡಿಕೊಡತಕ್ಕದ್ದು. ದಾವೆಯ ಪಕ್ಷಕಾರರಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಅಂಥ ಒಪ್ಪಂದ, ರಾಜಿ ಅಥವಾ ಮನವರಿಕೆಗೆ ಸಂಬಂಧಿಸಿದಂತೆ ಡಿಕ್ರಿ ಹೊರಡಿಸಬಹುದು. ಆದರೆ, ದಾವೆಯ ವಸ್ತು ವಿಷಯವಾಗಿರದ ವಿಶೇಷವಾದ ವಿಷಯಕ್ಕೆ ಅದು ವಿಸ್ತರಿಸಬಹುದು ಎಂದು ಅಭಿಪ್ರಾಯ ಪಡಲಾಗಿದೆ.

ಅಷ್ಟೇ ಅಲ್ಲದೆ,
ಸಿವಿಲ್ ಪ್ರಕ್ರಿಯಾ ಸಂಹಿತೆಯ 3 ನೇ ನಿಯಮದ 23 ನೇ ಆದೇಶದ ದೃಷ್ಟಿಯಿಂದ, ಪ್ರತಿವಾದಿಯು, ವಾದಿಯ ಇಡೀ ಕ್ಲೇಮನ್ನು ಮನದಟ್ಟು ಮಾಡಿಕೊಂಡು ನಿರ್ವಹಿಸಿದಾಗ ಮತ್ತು ಸದರಿ ಸಂಗತಿಯು ದಸ್ತಾವೇಜಿಯ ಸಾಕ್ಷ್ಯದಿಂದ ಸ್ಪಷ್ಟವಾಗಿ ಸಾಬೀತಾದಾಗ, ಹಾಗೂ ಸದರಿ ದಸ್ತಾವೇಜು ಪಕ್ಷಕಾರರದಿಂದ ನಿರ್ವಿವಾದವಾಗಿದ್ದಾಗ, ಅಧಿವಿಚಾರಣಾ ನ್ಯಾಯಾಲಯವು ಸದರಿ 'ರಾಜಿ'ಯನ್ನು ಗಮನಕ್ಕೆ ತೆಗೆದುಕೊಳ್ಳಲು ಮತ್ತು ದಾವೆಯನ್ನು

*ಆರ್.ಎಫ್.ಎ. ಸಂಖ್ಯೆ: 550/2013, ದಿನಾಂಕ: 1ನೇ ಏಪ್ರಿಲ್, 2015.

ವಜಾಗೊಳಸಲು ಬದ್ಧವಾಗಿರುತ್ತದೆ, ಅಧಿವಿಚಾರಣಾ ನ್ಯಾಯಾಲಯವು ಮಾಡಿರುವುದು ಖಚಿತವಾಗಿ ಅದೇ ಆಗಿದೆ ಎಂದು ಅಭಿಪ್ರಾಯ ಪಡಲಾಗಿದೆ.

ಮೇಲೆ ಹೇಳಲಾದ ಉಪಬಂಧದಲ್ಲಿ ಬಳಸಲಾದ ಭಾಷೆಯು ದಾವೆಯನ್ನು ರಾಜಿ ಮಾಡಿಸುವ ಎರಡು ವಿಧಾನಗಳನ್ನು ಉಪಬಂಧಿಸುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ ಎಂದರೆ, ದಾವೆಯನ್ನು ಲಿಖಿತದಲ್ಲಿ ಯಾವುದೇ ಕಾನೂನುಬದ್ಧ ಒಪ್ಪಂದ ಅಥವಾ ರಾಜಿಯಿಂದ ಸಂಪೂರ್ಣವಾಗಿ ಅಥವಾ ಭಾಗಶಃ ಹೊಂದಾಣಿಕೆ ಮಾಡಿಸಿದಾಗ ಪಕ್ಷಕಾರರಿಂದ ಸಹಿ ಮಾಡಿಸುವುದು. ಪ್ರತಿವಾದಿಯು ವಸ್ತು ವಿಷಯದ ಪೂರ್ಣ ಅಥವಾ ಯಾವುದೇ ಭಾಗಕ್ಕೆ ಸಂಬಂಧಿಸಿ ವಾದಿಗೆ ಮನವರಿಕೆ ಮಾಡಿಕೊಡುವುದು.

ದಾವೆಯ ಹೊಂದಾಣಿಕೆಯು ಲಿಖಿತದಲ್ಲಿದ್ದು, ಪಕ್ಷಕಾರರ ಸಹಿ ಹೊಂದಿರಬೇಕು. ಆದರೆ, ದಾವೆಯ ವಸ್ತು ವಿಷಯದ ಮನವರಿಕೆಗೆ ಸಂಬಂಧಪಟ್ಟಂತೆ ಅಂಥಹುದರ ಅಗತ್ಯತೆಯನ್ನು ನಿಗದಿಪಡಿಸಿಲ್ಲ. ಹೊಂದಾಣಿಕೆಯು ಕೊಡುವ ಮತ್ತು ತೆಗೆದುಕೊಳ್ಳುವ ಅಂಶವನ್ನು ಒಳಗೊಳ್ಳುತ್ತದೆ. (ಅಗತ್ಯವಾಗಿ ಒಳಗೊಳ್ಳಬಹುದು) ಹೊಂದಾಣಿಕೆಗೆ ಒಳಪಡಿಸಿದಾಗ, ಎರಡೂ ಪಕ್ಷಕಾರರ ಮೇಲೆ ಪರಸ್ಪರ ಹೊಣೆಗಾರಿಕೆ ಇದ್ದಿರಬಹುದು. ಅಂಥ ದಾವೆಯನ್ನು ಹೊಂದಾಣಿಕೆಯ ಆಧಾರದ ಮೇಲೆ, ಕಾರ್ಯಗತವಾಗಬಲ ಡಿಕ್ರಿಯನ್ನು ಹೊರಡಿಸಲು ಸಾಧ್ಯವಿರುತ್ತದೆ. ಆದುದರಿಂದ, ಅಂಥ ಹೊಂದಾಣಿಕೆಯಿಂದ ವಿವಾದವನ್ನು ಬಗೆಹರಿಸಲು ಎರಡೂ ಪಕ್ಷಕಾರರು ಪರಸ್ಪರ ಒಪ್ಪಿದಾಗ, ಒಪ್ಪಂದ ಅಥವಾ ರಾಜೀಯ ಪ್ರಕ್ರಿಯೆ ಅಥವಾ ನಿಬಂಧನೆಗಳನ್ನು ಕುರಿತ ವಾದವಿವಾದಗಳನ್ನು ಸಂಪೂರ್ಣವಾಗಿ ನಿವಾರಿಸಲಾಗದಿದ್ದರೂ, ಕಡಿಮೆ ಮಾಡುವ ದೃಷ್ಟಿಯಿಂದ ಅವುಗಳನ್ನು ಲಿಖಿತ ರೂಪದಲ್ಲಿರಿಸತಕ್ಕದು ಹಾಗೂ ಅದು ಪಕ್ಷಕಾರರ ಸಹಿಗಳನ್ನು ಹೊಂದಿರತಕ್ಕದ್ದೆಂದು ಕಾನೂನು ಕಡ್ಡಾಯಗೊಳಸಿರುತ್ತದೆ.

'ಲಿಖಿತದಲ್ಲಿ' ಮತ್ತು 'ಪಕ್ಷಕಾರರಿಂದ ಸಹಿ ಮಾಡಿಸಿ' ಎಂಬ ಪದಗಳನ್ನು ಸೇರಿಸುವ ಮೂಲಕ 23ನೇ ಕ್ರಮಾದೇಶದ 3ನೇ ನಿಯಮದ ತಿದ್ದುಪಡಿಯ ಪೂರ್ಣ ಉದ್ದೇಶವೇನೆಂದರೆ, ಮೊದಲನೆಯದಾಗಿ, ಯಾವುದೇ ಕಾನೂನುಬದ್ಧ ಒಪ್ಪಂದ ಅಥವಾ ರಾಜಿಯಿಂದ ದಾವೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಹೊಂದಾಣಿಕೆ ಮಾಡಲಾಗಿರುತ್ತದೆಯೆಂಬ ಸುಳ್ಳು ಹಾಗೂ ಕ್ಷುಲ್ಲಕ ವಾದಗಳನ್ನು ನಿವಾರಿಸುವುದು, ಎರಡನೆಯದಾಗಿ, ದಾವೆಯ ವ್ಯವಹರಣೆಗಳನ್ನು ವೃಥಾ ಬೆಳೆಸುವುದನ್ನು ಅಥವಾ

ವಿಳಂಬ ಮಾಡುವುದನ್ನು ತಪ್ಪಿಸುವುದು. ಅಂಥ ಕಾನೂನುಬದ್ಧವಾದ ಒಪ್ಪಂದ ಅಥವಾ ರಾಜಿಯನ್ನು ಲಿಖಿತರೂಪಕ್ಕಿಳಿಸದಿದ್ದಲ್ಲಿ ಹಾಗೂ ಪಕ್ಷಕಾರರ ಸಹಿ ಮಾಡಿಸದಿದ್ದಲ್ಲಿ ನ್ಯಾಯಾಲಯವು ಅದನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲ – ಸಿವಿಲ್ ಪ್ರಕ್ರಿಯಾ ಸಂಹಿತೆಯ 23ನೇ ಕ್ರಮಾದೇಶದ 3ನೇ ನಿಯಮದ ಸ್ಕೀಮು ವ್ಯಾಜ್ಯೆಯ ಬಹುಮುಖತೆಯನ್ನು (**Multiplicity**) ತಪ್ಪಿಸಲು ಇರುವುದಾಗಿದೆ ಮತ್ತು ಕಾನೂನು ಬದ್ಧವಾದ ಇತ್ಯರ್ಥಕ್ಕೆ ಬರಲು ಪಕ್ಷಕಾರರಿಗೆ ಅನುಮತಿಸುತ್ತದೆ, ಹಾಗೂ ಅದು ಪಕ್ಷಕಾರರ ಕಡೆಯಿಂದ ಸ್ವಯಿಚ್ಛೆಯ ಕಾರ್ಯವಾಗಿರತಕ್ಕದ್ದು ಎಂದು ಅಭಿಪ್ರಾಯಪಡಲಾಗಿದೆ.

ಮುಂದುವರಿದು, ಅಂಥ ಕಾನೂನುಬದ್ಧ ಒಪ್ಪಂದ ಅಥವಾ ರಾಜಿ ಮಾಡಿಕೊಂಡ ನಂತರವೂ ಮತ್ತು ಅದನ್ನು ಲಿಖಿತರೂಪಕ್ಕಿಳಿಸಿ, ಪಕ್ಷಕಾರರ ಸಹಿ ಮಾಡಿಸಿದ್ದರೂ ಸಹ, ಪಕ್ಷಕಾರರಲ್ಲಿ ಒಬ್ಬರು ಅಂಥ ಹೊಂದಾಣಿಕೆಯನ್ನು ನಿರಾಕರಿಸಿದರೆ, ಮತ್ತೊಬ್ಬ ಪಕ್ಷಕಾರನಿಗೆ ಪಕ್ಷಕಾರರಿಂದ ಯುಕ್ತವಾಗಿ ಸಹಿ ಮಾಡಲಾದ ಅಂಥ ಲಿಖಿತ ಪತ್ರವನ್ನು ಹಾಜರುಪಡಿಸಲು ಮತ್ತು ಅಂಥ ಕಾನೂನುಬದ್ಧ ಒಪ್ಪಂದ ಅಥವಾ ರಾಜಿಯನ್ನು ಮಾಡಿಕೊಳ್ಳಲಾಗಿತ್ತೆಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲು ಅವಕಾಶವಿದೆ, ಮತ್ತು ಅಂಥ ಕಾನೂನುಬದ್ಧ ಒಪ್ಪಂದ ಅಥವಾ ರಾಜಿಯನ್ನು ಲಿಖಿತ ರೂಪದಲ್ಲಿ, ಪಕ್ಷಕಾರರಿಂದ ಯುಕ್ತವಾಗಿ ಸಹಿ ಮಾಡಿಸಿದಲ್ಲಿ, ಆಗ ನ್ಯಾಯಾಲಯವು ಅಂಥ ಒಪ್ಪಂದ ಅಥವಾ ರಾಜಿಯನ್ನು ದಾಖಲಿಸಿಕೊಳ್ಳಲು ಆದೇಶಿಸತಕ್ಕದ್ದು ಹಾಗೂ ಅದಕ್ಕನುಸಾರವಾಗಿ ದಾವೆಯ ಪಕ್ಷಕಾರರಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಡಿಕ್ರಿ ಹೊರಡಿಸತಕ್ಕದ್ದು ಎಂದು ಅಭಿಪ್ರಾಯ ಪಡಲಾಗಿದೆ.

ದಾವೆಯ ಸಂಪೂರ್ಣ ಅಥವಾ ಭಾಗಶಃ ವಸ್ತು ವಿಷಯದ ಸಂಬಂಧದಲ್ಲಿ ಪ್ರತಿವಾದಿಯು ವಾದಿಗೆ ಮನವರಿಕೆ ಮಾಡಿಕೊಟ್ಟಲ್ಲಿ, ಅದನ್ನು ಲಿಖಿತ ರೂಪಕ್ಕಿಳಿಸುವ ಹಾಗೂ ಪಕ್ಷಕಾರರಿಂದ ಸಹಿ ಮಾಡಿಸುವ ಅಗತ್ಯವಿಲ್ಲ. ಅದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅದು ಕ್ಲೇಮಿನ ಹೊಂದಾಣಿಕೆಯ ಪ್ರಕರಣವಲ್ಲ. ಆದರೆ, ಅದು ವಾದಿಯ ಇಡೀ ಕ್ಲೇಮನ್ನು ನೆರವೇರಿಸುವ ಪ್ರಕರಣವಾಗಿದೆ. ಒಮ್ಮೆ ವಾದಿಯ ಕ್ಲೇಮು ಮನವರಿಕೆಯಾದಲ್ಲಿ ಮುಂದೆ ಮಾಡಲು ಏನೂ ಉಳಿದಿರುವುದಿಲ್ಲ. 'ಮನವರಿಕೆ'ಯನ್ನು ಅನುಸರಿಸುವ ಡಿಕ್ರಿಯು, ಡಿಕ್ರಿ ಹೊರಡಿಸುವುದಕ್ಕಿಂತ ಮುಂಚೆಯೇ ಕ್ಲೇಮು ನೆರವೇರಿರುವ ಕಾರಣ, ಅದು ಕಾರ್ಯಗತಗೊಳಿಸಬೇಕಾದ ಡಿಕ್ರಿಯಲ್ಲ ಹಾಗೂ ಡಿಕ್ರಿಯು ಅಂಥ ಮನವರಿಕೆಯನ್ನು ದಾಖಲಿಸುತ್ತದಷ್ಟೆ. ಪ್ರತಿವಾದಿಯು ವಾದಿಸಿದ

ಮನವರಿಕೆಯನ್ನು ನಿರಾಕರಿಸಿದರೆ, ಆಗ ನ್ಯಾಯಾಲಯವು ಮನವರಿಕೆಯ ಪ್ರಶ್ನೆಯನ್ನು ನಿರ್ಣಯಿಸತಕ್ಕದ್ದು. ಅಂಥ ಹೊಂದಾಣಿಕೆ ಅಥವಾ ಮನವರಿಕೆಯನ್ನು ಅಂಗೀಕರಿಸಬಹುದಾದ ಸಾಕ್ಷ್ಯವನ್ನು ನೀಡುವ ಮೂಲಕ ಸಾಬೀತುಪಡಿಸಿದಲ್ಲಿ ಹಾಗೂ ಪ್ರತಿವಾದಿಯು ವಾದಿಯ ಕ್ಲೇಮನ್ನು ನೆರವೇರಿಸಿದ್ದಾನೆಂದು ನ್ಯಾಯಾಲಯಕ್ಕೆ ಮನವರಿಕೆಯಾದಲ್ಲಿ, ಆಗ ನ್ಯಾಯಾಲಯವು ಅಂಥ ನೆರವೇರಿಕೆಯ ನಿಬಂಧನೆಗಳ ಅನುಸಾರ ಡಿಕ್ರಿ ಹೊರಡಿಸತಕ್ಕದ್ದು.

ನಿಯಮದಲ್ಲಿ ಕಂಡುಬರುವ "ನ್ಯಾಯಾಲಯದ ಮನವರಿಕೆಗೆ ಸಂಬಂಧಿಸಿದಂತೆ ರುಜುವಾತಾಗಿದ್ದಲ್ಲಿ" ಎಂಬ ಪದಗಳು, ರಾಜಿಯು ಕಾನೂನುಬದ್ಧವಾಗಿ ಆಗಿದೆಯೆ? ಎಂಬುದನ್ನು ವಿಚಾರಣೆ ಮಾಡಲು ನ್ಯಾಯಾಲಯಕ್ಕೆ ಕರ್ತವ್ಯವನ್ನು ವಿಧಿಸುವಷ್ಟು ವಿಸ್ತೃತವಾಗಿವೆ. ವ್ಯಕ್ತ ನಿಬಂಧನೆಗಳಲ್ಲಿ ಪರಂತುಕವು, ಹೊಂದಾಣಿಕೆ ಅಥವಾ ಮನವರಿಕೆ ಮಾಡಿಕೊಳ್ಳುವ ಪಕ್ಷಕಾರರ ಕುರಿತಾದ ವಿವಾದವನ್ನು ನಿರ್ಣಯಿಸಲು ನ್ಯಾಯಾಲಯಕ್ಕೆ ನಿರ್ದೇಶಿಸುತ್ತದೆ. ಆ ರೀತಿ ರಾಜಿ ಮಾಡಿಕೊಂಡಿಲ್ಲವೆಂದು ಅಥವಾ ವಂಚನೆ, ಒತ್ತಾಯ ಅಥವಾ ಅನುಚಿತ ಪ್ರಭಾವದಿಂದ ಅದನ್ನು ನಿರರ್ಥಕಗೊಳಿಸಲಾಗಿದೆಯೆಂದು ಮನವರಿಕೆಯಾಗಿದ್ದರೆ. ಅದು ರಾಜಿಯನ್ನು ತಿರಸ್ಕರಿಸಬೇಕು ಮತ್ತು ದಾವೆಯನ್ನು ಮುಂದುವರೆಸಬೇಕು. ಅದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಪಕ್ಷಕಾರರ ನಡುವೆ ಒಪ್ಪಂದ ಅಥವಾ ರಾಜಿಯನ್ನು ಕಾನೂನುಬದ್ಧವಾಗಿ ಮಾಡಿಕೊಳ್ಳಲಾಗಿದೆಯೆಂದು ಸ್ಪಷ್ಟವಾಗಿ ಸಾಬೀತುಪಡಿಸದ ಹೊರತು, ಸಿವಿಲ್ ಪ್ರಕ್ರಿಯಾ ಸಂಹಿತೆಯ 23 ನೇ ಕ್ರಮಾದೇಶದ 3 ನೇ ನಿಯಮದ ಅಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸಲಾಗದು.

ಕಾನೂನುಬದ್ಧ ಒಪ್ಪಂದ ಅಥವಾ ರಾಜಿಯನ್ನು ಲಿಖಿತ ರೂಪಕ್ಕಿಳಿಸದಿದ್ದಾಗ ಮತ್ತು ಪಕ್ಷಕಾರರಿಂದ ಸಹಿ ಹಾಕಿಸಿರದಿದ್ದಾಗ ಸಹ, 1976 ರ ಅಧಿನಿಯಮ 104 ರ ಮೂಲಕ ಸಿವಿಲ್ ಪ್ರಕ್ರಿಯಾ ಸಂಹಿತೆಗೆ ಮಾಡಲಾದ ತಿದ್ದುಪಡಿ ಏನೇ ಇದ್ದರೂ, ಆಗಲೂ ನ್ಯಾಯಾಲಯವು ಅಂಥ ಹೊಂದಾಣಿಕೆ ಅಥವಾ ಮನವರಿಕೆಯನ್ನು ದಾಖಲಿಸಲು ಆದೇಶಿಸಬಲ್ಲದು ಹಾಗೂ ದಾವೆಯ ವಸ್ತು ವಿಷಯದ ಸಂಬಂಧದಲ್ಲಿ ಪ್ರತಿವಾದಿಯು ವಾದಿಗೆ ಮನವರಿಕೆ ಮಾಡಿಕೊಟ್ಟಲ್ಲಿ, ಅದಕ್ಕನುಸಾರವಾಗಿ ಡಿಕ್ರಿ ಹೊರಡಿಸಬಲ್ಲದು. ಈ ಸಂದರ್ಭದಲ್ಲಿಯೇ, ಪಕ್ಷಕಾರರು ಒಪ್ಪಂದ ಅಥವಾ ರಾಜಿಯನ್ನು

**ಲಿಖಿತ ರೂಪಕ್ಕಿಳಿಸದಿದ್ದಲ್ಲಿ ಮತ್ತು ರಾಜಿ ಅಥವಾ ಒಪ್ಪಂದವನ್ನು ಪಕ್ಷಕಾರರಲ್ಲಿ ಒಬ್ಬರು ಸರಿಯೆಂದು ಹೇಳಿ ಹಾಗೂ ಇನ್ನೊಬ್ಬರು ಅದನ್ನು ಅಲ್ಲಗಳೆದು ವಿವಾದವುಂಟಾದ ಪ್ರಕರಣದಲ್ಲಿ ಮಾತ್ರ ಈ ಪರಂತುಕವು ಮುಖ್ಯ ಪಾತ್ರವಹಿಸುತ್ತದೆ. ಆದ್ದರಿಂದ, 1976ರ ಅಧಿನಿಯಮ ಸಂಖ್ಯೆ: 104 ರ ಮೂಲಕ ಸೇರ್ಪಡೆಯಾದ ಪರಂತುಕವು ಆ ಪ್ರಶ್ನೆಯನ್ನು ನಿರ್ಣಯಿಸಲು ನ್ಯಾಯಾಲಯಕ್ಕೆ ನಿರ್ದೇಶಿಸುತ್ತದೆ. ಅಷ್ಟೇ ಅಲ್ಲದೆ, ಸದರಿ ಪ್ರಶ್ನೆಯನ್ನು ನಿರ್ಣಯಿಸುವ ಉದ್ದೇಶಕ್ಕಾಗಿ ಯಾವುದೇ ಮುಂದೂಡಿಕೆಯನ್ನು ನೀಡತಕ್ಕದಲ್ಲವೆಂದು ನಿರ್ದೇಶಿಸುತ್ತದೆ.**

**ಅಪೀಲನ್ನು ವಜಾಗೊಳಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** **ಪ್ಯಾರಾದಲ್ಲಿ**

*1. ಎಐಆರ್ 1988 ಎಸ್‌ಸಿ 400*
*ಗುರ್ ಪ್ರೀತ್ ಸಿಂಗ್ –ವಿರುದ್ಧ–*
*ಚತುರ್ ಭುಜ್ ಗೋಯಲ್* *(ಉಲ್ಲೇ) 32*

ಅರ್ಜಿದಾರರ ಪರ: ಶ್ರೀ ಎನ್. ದಿನೇಶ್‌ರಾವ್, ವಕೀಲರು
ಮೆಸರ್ಸ್ ರಾವ್ ಆಸೋಷಿಯೇಟ್ಸ್ ಪರವಾಗಿ.
1ನೇ ಪ್ರತ್ಯರ್ಜಿದಾರರ ಪರ :ಶ್ರೀ ಎ. ಕೇಶವ ಭಟ್, ವಕೀಲರು.
2ನೇ ಪ್ರತ್ಯರ್ಜಿದಾರರ ಪರ: ಶ್ರೀ ಕೆ.ಎನ್. ಫಣೀಂದ್ರ, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎನ್. ಕುಮಾರ್:**

1. ಅಧಿವಿಚಾರಣಾ ನ್ಯಾಯಾಲಯವು ದಾವೆಯನ್ನು ವಜಾಗೊಳಿಸಿ ನೀಡಿದ ತೀರ್ಪು ಮತ್ತು ಡಿಕ್ರಿಗೆ ವಿರುದ್ಧವಾಗಿ ಈ ನಿಯತ ಒಂದನೇ ಅಪೀಲನ್ನು ವಾದಿಯು ಸಲ್ಲಿಸಿದ್ದಾರೆ.

2. ಅನುಕೂಲದ ಉದ್ದೇಶಕ್ಕಾಗಿ ಪಕ್ಷಕಾರರನ್ನು ದಾವೆಯಲ್ಲಿ ಉಲ್ಲೇಖಿಸಲಾಗಿರುವಂತೆ ಉಲ್ಲೇಖಿಸಲಾಗಿದೆ.

3. ವಾದಿಯು ಒಂದು ಸಹಕಾರ ಸಂಘವಾಗಿದ್ದು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ರ ಉಪಬಂಧಗಳಡಿ ನೋಂದಣಿಯಾಗಿದೆ. ಅದು ಗೌರಿಬಿದನೂರಿನಲ್ಲಿ ಒಂದು ಸಕ್ಕರೆ ಕಾರ್ಖಾನೆ ಮತ್ತು ಭಟ್ಟಿ ಕಾರ್ಖಾನೆಯನ್ನು ಹೊಂದಿತ್ತು. ವಾದಿಯು ಸದರಿ ಕಾರ್ಖಾನೆಯನ್ನು ನಡೆಸಲಾಗದೆ ನಷ್ಟಗಳನ್ನು ಭರಿಸುವುದನ್ನು ಮುಂದುವರೆಸಿತ್ತು. ಆದುದರಿಂದ 1984 ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಉಪಬಂಧಗಳಡಿ ಅದನ್ನು ಸಮಾಪನಕ್ಕಾಗಿ ಮುಂದಿಡಲಾಗಿತ್ತು. ಅಧಿಸೂಚನೆಯ ದಿನಾಂಕ 3.4.1987ರಲ್ಲಿರುವಂತೆ ಸಕ್ಕರೆ ಕಾರ್ಖಾನೆಯನ್ನು ಭಟ್ಟಿ ಕಾರ್ಖಾನೆಯೊಂದಿಗೆ ಮಾರಾಟಕ್ಕಾಗಿ ಪರಿಸಮಾಪಕನು ಅಧಿಸೂಚಿಸಿರುತ್ತಾನೆ. ಎರಡನೇ ಪ್ರತಿವಾದಿಯಾದ ಮೆಸರ್ಸ್ ಸಿರಗುಪ್ಪ ಶುಗರ್ಸ್ ಅಂಡ್ ಕೆಮಿಕಲ್ಸ್ ಲಿಮಿಟೆಡ್‌ನವರು ವಾದಿಯ ಸಕ್ಕರೆ ಕಾರ್ಖಾನೆ ಮತ್ತು ಭಟ್ಟಿ ಕಾರ್ಖಾನೆಯನ್ನು 5,04,11,111/– ರೂ. ಗಳಿಗೆ ಖರೀದಿಸಿದರು. ವಾದಿಯು ಎರಡನೇ ಪ್ರತಿವಾದಿಯ ಹೆಸರಿನಲ್ಲಿ ದಿನಾಂಕ 18/06/1988ರ ನೋಂದಾಯಿತ ಕ್ರಯಪತ್ರವನ್ನು ಕಾರ್ಯಗತಗೊಳಿಸಿರುತ್ತಾನೆ. ಕ್ರಯಪತ್ರದ ಆಧಾರದ ಮೇಲೆ ಒಟ್ಟು ಹಣದಲ್ಲಿ 1.5 ಕೋಟಿ ರೂ. ಮೊತ್ತವನ್ನು ಮುಂಗಡವಾಗಿ ಡೌನ್ ಪೇಮೆಂಟಾಗಿ ಪಾವತಿಸಲಾಯಿತು. ಕ್ರಯಪತ್ರಕ್ಕೆ ಲಗತ್ತಿಸಲಾದ ಪಾವತಿ ಅನುಸೂಚಿಯ ಪ್ರಕಾರ, ಉಳಿದ ಮಾರಾಟ ಹಣವನ್ನು ಡೌನ್‌ಪೇಮೆಂಟಿನ ದಿನಾಂಕದಿಂದ ಆರು ತಿಂಗಳು ಮುಕ್ತಾಯವಾದಂದಿನಿಂದ ಪ್ರಾರಂಭಿಸಿ, ವಾರ್ಷಿಕ ಶೇ. 14 ರ ದರದಲ್ಲಿ ಸರಳ ಬಡ್ಡಿಯೊಂದಿಗೆ ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಪಾವತಿಸಬೇಕಾಗಿತ್ತು. ಅಂತಹ ಪ್ರತಿಯೊಂದು ಕಂತಿನ ಪಾವತಿಗೆ ಬ್ಯಾಂಕ್ ಖಾತರಿಯಿಂದ ಮತ್ತು ಎರಡು ಘಟಕಗಳ ಎಂದರೆ, ಕಾರ್ಖಾನೆ ಹಾಗೂ ಭಟ್ಟಿ ಕಾರ್ಖಾನೆಯ ಆಸ್ತಿಯ ಮೇಲಿನ ಋಣಭಾರದಿಂದ ಭದ್ರತೆ ನೀಡಲಾಗಿತ್ತು.

4. ಎರಡನೇ ಪ್ರತಿವಾದಿಯು ಯಾವುದೇ ಅಥವಾ ಎಲ್ಲಾ ಅರ್ಧ ವಾರ್ಷಿಕ ಕಂತುಗಳನ್ನು ಪಾವತಿಸಲು ತಪ್ಪಿದಲ್ಲಿ, ಬ್ಯಾಂಕು ವಾರ್ಷಿಕ ಶೇ.14 ರ ದರದಲ್ಲಿ

ಬಡ್ಡಿಯೊಂದಿಗೆ ಗರಿಷ್ಠ ರೂ.3,54,11,111/– ಮೊತ್ತವನ್ನು ಪಾವತಿಸಲು ಕೋರಬಹುದಾದಂತೆ, ಅಂಥ ಮೊತ್ತ ಅಥವಾ ಮೊತ್ತಗಳನ್ನು ಯಾವುದೇ ಅಕ್ಷೇಪಣೆ ಮಾಡದೆ ವಾದಿಗೆ ಪಾವತಿಸತಕ್ಕದ್ದು ಎಂದು ದೃಢಪಡಿಸಿ, ಮೊದಲನೇ ಪ್ರತಿವಾದಿ–ಬ್ಯಾಂಕು ಎರಡನೇ ಪ್ರತಿವಾದಿಯೊಂದಿಗೆ ದಿನಾಂಕ: 18.06.1988 ರಂದು ವಾದಿಯ ಪರವಾಗಿ ಬ್ಯಾಂಕ್ ಖಾತರಿಯನ್ನು ನೀಡಿದೆ. ಸದರಿ ಬ್ಯಾಂಕ್ ಖಾತರಿಯು ಸಂಪೂರ್ಣ ಮೊತ್ತ ಪಾವತಿಯಾಗುವವರೆಗೂ ಜಾರಿಯಲ್ಲಿರತಕ್ಕದ್ದು. ಎರಡನೇ ಪ್ರತಿವಾದಿಯು ಡಿಸೆಂಬರ್ 1982 ಮತ್ತು ಡಿಸೆಂಬರ್ 1990ರ ನಡುವೆ ವಾದಿಗೆ ಆರು ಕಂತುಗಳ ಪೈಕಿ ಐದು ಕಂತುಗಳನ್ನು ಪಾವತಿಸಿದ್ದಾನೆ. ರೂ.59, 01,851/– ಗಳ ಕೊನೆಯ ಹಾಗೂ 6ನೇ ಕಂತು ರೂ.63,14,980.57/– ಗಳಿಗೆ ಸಮನಾಗಿದ್ದು ದಿನಾಂಕ 18/06/1991 ರಂದು ಇದ್ದಂತೆ ಬಾಕಿ ಉಳಿದಿತ್ತು. ಎರಡನೇ ಪ್ರತಿವಾದಿಯ ಕೋರಿಕೆಯ ಮೇರೆಗೆ ಮತ್ತು ಮೊದಲನೇ ಪ್ರತಿವಾದಿಯ ಬ್ಯಾಂಕಿನ ಒಪ್ಪಿಗೆಯೊಂದಿಗೆ ಹಾಗೂ ಸಹಕಾರ ಇಲಾಖೆಯ ಉನ್ನತ ಪ್ರಾಧಿಕಾರಿಗಳ ಪೂರ್ವಾನುಮೋದನೆಯೊಂದಿಗೆ ಸಹ ವಾದಿಯು ಅಂತಿಮ ಕಂತಿನ ಪಾವತಿಗಾಗಿ ಕಾಲಾವಧಿಯನ್ನು ಕಾಲಕಾಲಕ್ಕೆ ವಿಸ್ತರಿಸಿತು. ದಿನಾಂಕ 10.03.1993 ರಂದು ಅಂಥ ಕೊನೆಯ ವಿಸ್ತರಣೆಯಾಗಿತ್ತು ಹಾಗೂ ಕಾಲಾವಧಿಯನ್ನು 18.03.1993 ವರೆಗೆ ವಿಸ್ತರಿಸಲಾಯಿತು ವಾದಪತ್ರದ 5ನೇ ಕಂಡಿಕೆಯಲ್ಲಿ ಏಳು ಪತ್ರಗಳ ಪೂರ್ಣ ವಿವರವನ್ನು ನಿರೂಪಿಸಲಾಗಿದೆ.

5. ಎರಡನೇ ಪ್ರತಿವಾದಿಗೆ ಸಾಕಷ್ಟು ಅವಕಾಶ ನೀಡಲಾಗಿದ್ದರೂ, 6ನೇ ಕಂತನ್ನು ವಿಸ್ತರಿಸಿದ ಅವಧಿಯೊಳಗೆ ಪಾವತಿಸಿರಲಿಲ್ಲ. ಆದುದರಿಂದ, ವಾದಿಯು ದಿನಾಂಕ 28.07.1993 ರ ತನ್ನ ಪತ್ರದ ಮೂಲಕ ತನಗೆ ರೂ. 87,82,343/– ಗಳನ್ನು ಪಾವತಿಸಲು ಪ್ರತಿವಾದಿ–ಬ್ಯಾಂಕನ್ನು ಕೋರಿ, ಬ್ಯಾಂಕ್ ಖಾತರಿಗಾಗಿ ಪ್ರಾರ್ಥಿಸಿತು. ಎರಡನೇ ಪ್ರತಿವಾದಿಯು, ಬ್ಯಾಂಕ್ ಖಾತರಿ ಕೋರಿ ದಿನಾಂಕ 28.07.1993ರ ಪತ್ರವನ್ನು ಪ್ರಶ್ನಿಸಿ, ರಿಟ್ ಅರ್ಜಿ ಸಂಖ್ಯೆ. 27602/1993 ರಲ್ಲಿ ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾನೆ ಮತ್ತು ಯಾವುದೇ ಪಾವತಿ ಮಾಡುವುದರಿಂದ ಬ್ಯಾಂಕನ್ನು ನಿರ್ಬಂಧಿಸಿ 4.8.1993 ರಂದು ಮಧ್ಯಕಾಲೀನ ತಡೆಯಾಜ್ಞೆಯನ್ನು ಜಾರಿಗೊಳಿಸಿತ್ತು. ತರುವಾಯ, ರಿಟ್ ಅರ್ಜಿಯು ವಜಾಗೊಂಡಿತು.

6. ವಾದಿಯು ಮತ್ತೊಮ್ಮೆ 15.4.1994 ರಂದು ಬ್ಯಾಂಕ್‌ಖಾತರಿಯನ್ನು ಕೋರಿದೆ ಹಾಗೂ ರೂ. 1,01,58,644/– ಗಳ ಮೊತ್ತವನ್ನು ಪಾವತಿಸಲು ಬ್ಯಾಂಕನ್ನು ಕೋರಿದ್ದು, ಅದು ಆ ದಿನದಂದು ಇದ್ದಂತೆ ಬಾಕಿ ಉಳಿದಿತ್ತು, ಎರಡನೇ ಪ್ರತಿವಾದಿಯು, ಬ್ಯಾಂಕ್‌ಖಾತರಿಯನ್ನು ಕೋರುವುದರಿಂದ ವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿ, ಮೂಲದಾವೆ ಸಂಖ್ಯೆ. 10226/14ನ್ನು ಸಲ್ಲಿಸಿದ್ದಾರೆ. ಅರ್ಜಿಯನ್ನು ತಾತ್ಕಾಲಿಕ ನಿರ್ಬಂಧಕಜ್ಞೆಯ ಆದೇಶಕ್ಕಾಗಿ ಸಲ್ಲಿಸಿದ ನಂತರ, ಯಥಾಸ್ಥಿತಿಯನ್ನು ಕಾಪಾಡಲು ಆದೇಶವನ್ನು ಹೊರಡಿಸಲಾಗಿತ್ತು. ಹಾಗಿದ್ದರೂ, ಎರಡೂ ಪಕ್ಷಕಾರರ ಸುನಾವಣೆ ನಡೆಸಿದ ನಂತರ 5.9.1994 ರಂದು, ತಾತ್ಕಾಲಿಕ ನಿರ್ಬಂಧಕಾಜ್ಞೆಯ ಕೋರಿಕೆಯನ್ನು ತಿರಸ್ಕರಿಸಲಾಗಿತ್ತು. ಎರಡನೇ ಪ್ರತಿವಾದಿಯು ಸದರಿ ಆದೇಶವನ್ನು ಪ್ರಶ್ನಿಸಿ, ಈ ನ್ಯಾಯಾಲಯದ ಮುಂದೆ ಎಂ.ಎಫ್.ಎ.630/94ನ್ನು ಸಲ್ಲಿಸಿದ್ದಾರೆ. ಮತ್ತೊಮ್ಮೆ ಮಧ್ಯಂತರ ತಡೆಯಾಜ್ಞೆಯನ್ನು ಹೊರಡಿಸಿತ್ತು. ಆದಾಗ್ಯೂ, ದಿನಾಂಕ 9.3.2001 ರ ಆದೇಶದ ಮೂಲಕ ಸದರಿ ಅಪೀಲನ್ನು ತತ್ಪರಿಣಾವಾಗಿ ಹಿಂತೆಗೆದುಕೊಳ್ಳಲಾಗಿತ್ತು. ಈ ಮೊದಲು ನೀಡಿದ್ದ ಮಧ್ಯಂತರ ಆದೇಶವನ್ನು ಸಹ ಹಿಂತೆಗೆದುಕೊಳ್ಳಲಾಯಿತು.

7. ಆ ನಂತರ, ವಾದಿಯು ಮತ್ತೊಮ್ಮೆ ತನ್ನ ಪತ್ರ ದಿನಾಂಕ 31.5.2001 ರ ಮೂಲಕ ಬ್ಯಾಂಕ್ ಖಾತರಿಯನ್ನು ಕೋರಿತ್ತು ಮತ್ತು ಹಣ ಪಾವತಿಯ ದಿನಾಂಕದವರೆಗೆ ಪ್ರತಿ ವರ್ಷಕ್ಕೆ ಶೇ. 20 ರ ದರದಲ್ಲಿ ಚಕ್ರ ಬಡ್ಡಿಯೊಂದಿಗೆ ರೂ. 4,01,77,064.64/– ಗಳನ್ನು ಪಾವತಿಸಲು ಮೊದಲನೇ ಪ್ರತಿವಾದಿಯನ್ನು ಕೋರಲಾಗಿತ್ತು. ಮೊದಲನೇ ಪ್ರತಿವಾದಿ ಬ್ಯಾಂಕು ದಿನಾಂಕ 7.8.2003 ರ ಪತ್ರದ ಮೂಲಕ 79.25 ಲಕ್ಷ ರೂ. ಗಳನ್ನು ಪಾವತಿಸಲು ಮುಂದೆ ಬಂತು. ಸದರಿ ಮೊತ್ತವನ್ನು ಪಾವತಿ ಮಾಡದಿದ್ದ ಕಾರಣ, ವಾದಿಯು ಬ್ಯಾಂಕಿನ ವಿರುದ್ಧ 7,58,31,272/– ರೂ. ಮೊತ್ತದ ವಸೂಲಿಗಾಗಿ ದಾವೆ ಹೂಡಿತ್ತು.

8. ಸಮನುಗಳನ್ನು ಜಾರಿಗೊಳಿಸಿದ ನಂತರ, ಮೊದಲನೇ ಪ್ರತಿವಾದಿಯು ಹಾಜರಾಗಿ ಸವಿವರವಾದ ಲಿಖಿತ ಹೇಳಿಕೆಯನ್ನು ದಾಖಲಿಸಿತು. ಸಕ್ಕರೆ ಕಾರ್ಖಾನೆಯನ್ನು ರೂ. 5,04,11,111/– ಗಳ ಒಟ್ಟು ಹಣಕ್ಕಾಗಿ ಮಾರಾಟ ಮಾಡಲಾಗಿದ್ದು,

ರೂ.1.5 ಕೋಟಿ ಗಳನ್ನು ಸಂದಾಯ ಮಾಡಲಾಗಿದೆಯೆಂಬುದರಲ್ಲಿ ಅವರಿಗೆ ಯಾವುದೇ ವಿವಾದವಿಲ್ಲ ಮತ್ತು ಬ್ಯಾಂಕ್ ಖಾತರಿಯ ಜಾರಿ, ಪಾವತಿಸಬೇಕಾದ 6 ಕಂತುಗಳು ಹಾಗೂ ಎರಡನೇ ಪ್ರತಿವಾದಿಯು ಐದು ಕಂತುಗಳನ್ನು ಪಾವತಿಸಿರುವುದು ಇವುಗಳಲ್ಲಿ ಯಾವುದೇ ವಿವಾದವಾಗಿಲ್ಲ.

ಪತ್ರಗಳನ್ನು ಬರೆಯುವ ಮೂಲಕ ವಾದಿಯು ಬ್ಯಾಂಕ್ ಖಾತರಿ ಕೋರಿದ್ದನ್ನು ಅವರು ಒಪ್ಪಿಕೊಂಡಿದ್ದರು. ವಾದಿಗೆ 6 ಕಂತುಗಳಿಗಾಗಿ ಕಾನೂನುಬದ್ಧವಾಗಿ ಸಂದಾಯ ಮಾಡಬೇಕಾದ ಮೊತ್ತವನ್ನು ಪಾವತಿಸಲು ಅವರು ಯಾವಾಗಲೂ ಸಿದ್ಧರಾಗಿದ್ದರು ಹಾಗೂ ಸಮ್ಮತಿಸಿದ್ದರು ಎಂದು ಅವರು ಒಪ್ಪಿಕೊಂಡಿದ್ದರು. ಆದಾಗ್ಯೂ, ಉಚ್ಚ ನ್ಯಾಯಾಲಯ ಹಾಗೂ ಸಿವಿಲ್ ನ್ಯಾಯಾಲಯವು ಹೊರಡಿಸಿದ ಮಧ್ಯಂತರ ಆದೇಶಗಳ ಕಾರಣದಿಂದಾಗಿ, ಅಂಥ ಪಾವತಿಯನ್ನು ಮಾಡುವುದರಿಂದ ಅವರನ್ನು ತಡೆಯಾಲಾಯಿತು. ಆದುದರಿಂದ, ಸದರಿ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ, ಮೊದಲನೇ ಪ್ರತಿವಾದಿಯು ಬ್ಯಾಂಕ್ ಖಾತರಿಯನ್ನು ನೀಡಿರಲಿಲ್ಲ ಮತ್ತು ವಾದಿಯು ಹಣವನ್ನು ಸ್ವೀಕರಿಸಿರಲಿಲ್ಲ. ವಾದಿಯು ಆದೇಶದಿಂದ ಬಾಧಿತನಾಗಿದ್ದು, ಅವನು ಹಿಂದೆ ಹೇಳಿದ ಅವಧಿಗಳಿಗೆ ಬಡ್ಡಿಯ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲಾಗದು. ಮೊದಲನೇ ಪ್ರತಿವಾದಿ–ಬ್ಯಾಂಕು ಅಂಥ ದೊಡ್ಡ ಮೊತ್ತದ ಬಡ್ಡಿಯನ್ನು ಪಾವತಿಸಲು, ಯಾವುದೇ ರೀತಿಯಲ್ಲೂ ಹೊಣೆಯಾಗಿರಲಿಲ್ಲ ಸದರಿ ಅವಧಿಗೆ ಬಡ್ಡಿ ಪಾವತಿಸಲು ಹೊಣೆಗಾರಿಕೆಯನ್ನು ಬ್ಯಾಂಕಿನ ಮೇಲೆ ಹೊರಿಸಲಾಗದು.

9. ದಾವೆಯನ್ನು ಕಾಲಪರಿಮಿತಿಯಿಂದ ನಿರ್ಬಂಧಿಸಲಾಗಿದೆಯೆಂದು ಸಹ ಮೊದಲನೇ ಪ್ರತಿವಾದಿ ವಾದಿಸಿರುತ್ತದೆ. ಆದುದರಿಂದ, ದಾವೆಯನ್ನು ಸಲ್ಲಿಸುವ ಉದ್ದೇಶಕ್ಕಾಗಿ ಕಾಲಪರಿಮಿತಿಯು ಮೊಟ್ಟಮೊದಲ ಬಾರಿಗೆ 28.7.1993 ರಂದು ಬ್ಯಾಂಕ್ ಖಾತರಿಯನ್ನು ಕೋರುವುದರಿಂದ ಪ್ರಾರಂಭವಾಗಿರುತ್ತದೆ. ವಾಸ್ತವವಾಗಿ, ತಡೆಯಾಜ್ಞೆಯನ್ನು ತೆರವುಗೊಳಿಸಿದ ನಂತರ ಖಾತರಿ ಮೊತ್ತವನ್ನು ಪಾವತಿಸಲು ಋಣವಿಮೋಚಕನು ದಿನಾಂಕ: 31.5.2001 ರ ತನ್ನ ಪತ್ರದಲ್ಲಿ ಬ್ಯಾಂಕನ್ನು ಕೋರಿರುತ್ತಾನೆ. ಆದುದರಿಂದ, ಹೂಡಲಾದ ದಾವೆಯನ್ನು ಕಾಲಪರಿಮಿತಿಯಿಂದ ನಿರ್ಬಂಧಿಸಲಾಗಿದೆ. ಅಸಲು ಮತ್ತು ಬಡ್ಡಿ ಸೇರಿದಂತೆ ರೂ. 79,25,018.20/–

ಗಳಿಗೆ ಖಾತರಿ ಮೇರೆಗೆ ಬ್ಯಾಂಕು ದಿನಾಂಕ 15.12.1992ರ ತನ್ನ ಪತ್ರದ ಮೂಲಕ ಹೊಣೆಯನ್ನು ನಿರ್ಬಂಧಿಸಿತ್ತು ಎಂದು ಸಹ ವಾದಿಸಲಾಗಿತ್ತು. ಅವರು ಖಾತರಿಯ ಮುಕ್ತಾಯದ ದಿನಾಂಕವನ್ನು ಸಹ ಸೂಚಿಸಿದ್ದರು ಮತ್ತು ಆದುದರಿಂದ, ಬ್ಯಾಂಕು ಖಾತರಿ ನೀಡುವುದನ್ನು ಮುಕ್ತಾಯಗೊಳಿಸಿದೆ. ವಾದಿಯು ಎರಡನೇ ಪ್ರತಿವಾದಿಗೆ ನೀಡಿದ ಏಕಪಕ್ಷೀಯ ವಿಸ್ತರಣೆಯು ಏನೇ ಆಗಲಿ, ಯಾವುದೇ ವಿಸ್ತರಣೆಗೆ ಮೊದಲನೇ ಪ್ರತಿವಾದಿಯನ್ನು ಬದ್ಧಗೊಳಿಸುವುದಿಲ್ಲ. ಆದುದರಿಂದ, ಆ ಲೆಕ್ಕಾಚಾರದಲ್ಲೂ ಸಹ ದಾವೆಯನ್ನು ಕಾಲಪರಿಮಿತಿಯಿಂದ ನಿರ್ಬಂಧಿಸಲಾಗಿದೆ. ಮೆಸರ್ಸ್ ಸಿರಗುಪ್ಪ ಷುಗರ್ಸ್ ಅಂಡ್ ಕೆಮಿಕಲ್ಸ್ ಲಿಮಿಟೆಡ್‌ನಲ್ಲಿ ಖರೀದಿದಾರನ ಬಾಕಿಗಳಿಗೆ ಸಂಬಂಧಿಸಿ, ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಮುಂದೆ ದಿನಾಂಕ 30.7.2001ರಂದು ಸಭೆ ನಡೆಸಲಾಗಿತ್ತೆಂದು ಸಹ ಅವರು ವಾದಿಸಿದ್ದಾರೆ. ಅಷ್ಟೇ ಅಲ್ಲದೆ, ಸವಿವರವಾದ ಚರ್ಚೆಯ ನಂತರ, ಒಂದು ತೀರ್ಮಾನಕ್ಕೆ ಬರಲಾಗಿತ್ತು ಮತ್ತು 18.6.1993 ರಂದು ಇದ್ದಂತೆ ಬಾಕಿಗಳನ್ನು ತೀರಿಸಲು ಋಣ ವಿಮೋಚಕನನ್ನು ನೇಮಿಸಲಾಗಿತ್ತೇ ಹೊರತು ಆ ನಂತರ ಅಲ್ಲ. ಹೇಳಿಕೆಗೆ ವಾದಿಯು ಸಹ ಬದ್ಧನಾಗಿರಬೇಕು ಮತ್ತು ವಾದಿಯು ತರುವಾಯದ ಬಡ್ಡಿಯನ್ನು ಕೋರಲಾಗದು. ಎರಡನೇ ಪ್ರತಿವಾದಿಯು B.I.F.R. ಮುಂದೆ ಇದೆ. ಆದ್ದರಿಂದ ರೋಗಗ್ರಸ್ತ ಕೈಗಾರಿಕಾ ಕಂಪನಿಗಳ (ವಿಶೇಷ ಉಪಬಂಧ) ಅಧಿನಿಯಮ, 1995 ರ 22 ನೇ ಪ್ರಕರಣದ ಕಾರಣದಿಂದಾಗಿ ದಾವೆಯು ಸಮರ್ಥನೀಯವಾಗಿಲ್ಲ ಎಂದು ವಾದಿಸಿದ್ದಾರೆ.

10. ಎರಡನೇ ಪ್ರತಿವಾದಿಯು ತಮ್ಮನ್ನು ಪಕ್ಷಕಾರರನ್ನಾಗಿ ಸೇರಿಸಲು ಅರ್ಜಿ ಸಲ್ಲಿಸಿದ್ದರು ಮತ್ತು ಅದನ್ನು ಪುರಸ್ಕರಿಸಲಾಗಿತ್ತು. ಆ ನಂತರ, ಕಾರ್ಖಾನೆಯ ಮಾರಾಟಕ್ಕೆ ಸಂಬಂಧಿಸಿದಂತೆ, ಅದರಲ್ಲೂ ವಿಶೇಷವಾಗಿ, ರೂ.5,04,11,111/– ಗಳ ಒಟ್ಟು ಹಣಕ್ಕೆ ಡೌನ್ ಪೇಮೆಂಟಾಗಿ 1.5 ಕೋಟಿ ರೂ. ಗಳ ಸಂದಾಯ ಮತ್ತು ಆರು ಕಂತುಗಳಲ್ಲಿ ಬಾಕಿ ಹಣ ಪಾವತಿಸಲು ಒಪ್ಪಂದ, ಬ್ಯಾಂಕ್ ಖಾತರಿ ನೀಡಿಕೆ, ಒಪ್ಪಿತ ನಿಬಂಧನೆಗಳ ಪ್ರಕಾರ ಐದು ಕಂತುಗಳ ಸಂದಾಯ ಮತ್ತು 6 ನೇ ಕಂತಿಗೆ ಸಂಬಂಧಪಡುವಷ್ಟರಮಟ್ಟಿಗೆ ಎರಡನೇ ಪ್ರತಿವಾದಿಯು ಎಸಗಿದ ತಪ್ಪಿಗೆ ಸಂಬಂಧಿಸಿದಂತೆ ಬ್ಯಾಂಕು ಹೇಳಿರುವುದನ್ನು ಪುನರುಚ್ಚರಿಸಿ, ಸವಿವರವಾದ

ಲಿಖಿತ ಹೇಳಿಕೆಯನ್ನು ಅವರು ಸಲ್ಲಿಸಿದ್ದಾರೆ. ವಾದಿಯು ಬ್ಯಾಂಕ್ ಖಾತರಿ ಕೋರಿರುವುದನ್ನು ಮತ್ತು ರಿಟ್ ಅರ್ಜಿ ಸಲ್ಲಿಸಿರುವುದನ್ನು ಮತ್ತು ಮಧ್ಯಂತರ ಆದೇಶ ಹೊರಡಿಸಿರುವುದನ್ನು, ವಾದಿಯು ಸಲ್ಲಿಸಿದ ರಿಟ್ ಅರ್ಜಿ ವಜಾ ಆಗಿದ್ದನ್ನು, ದಾವೆ ಹೂಡಿರುವುದನ್ನು, ಅರ್ಜಿ ವಜಾ ಆಗಿದ್ದನ್ನು, ಈ ನ್ಯಾಯಾಲಯದ ಮುಂದೆ ಅಪೀಲು ಸಲ್ಲಿಸಿರುವುದನ್ನು, ಮಧ್ಯಂತರ ಆದೇಶ ನೀಡಿರುವುದನ್ನು, ಅಪೀಲನ್ನು ಹಿಂತೆಗೆದುಕೊಂಡಿದ್ದನ್ನು ಸಹ ಅವರು ಒಪ್ಪಿದ್ದಾರೆ.

11. ಆ ನಂತರ, ರಾಜ್ಯ ಸರ್ಕಾರದ ಆಣತಿಯಂತೆ, ಪಕ್ಷಕಾರರ ನಡುವೆ ಆದ ರಾಜಿ ಮಾತುಕತೆಯನ್ನು ಮತ್ತು ಪಕ್ಷಕಾರರ ನಡುವೆ ಆದ ಒಪ್ಪಂದವನ್ನು ವಾದಿಯ ಇಡೀ ಕ್ಲೇಮಿನ ಸಂಪೂರ್ಣ ಹಾಗೂ ಅಂತಿಮ ಇತ್ಯರ್ಥಕ್ಕಾಗಿ ಒಪ್ಪಿತವಾದ ಬಾಕಿ ಮೊತ್ತದ ಸಂದಾಯವನ್ನು ಸಹ ಅವರು ವಿವರವಾಗಿ ನಿರೂಪಿಸಿದ್ದಾರೆ. ಅವರು ಈ ಸಂಬಂಧ ಅಗತ್ಯ ಪತ್ರ ವ್ಯವಹಾರಗಳನ್ನು, ಋಣವಿಮೋಚಕನು ಬರೆದ ಪತ್ರಗಳನ್ನು ಮತ್ತು ಸ್ವೀಕರಿಸಿದ್ದಕ್ಕಾಗಿ ಸ್ವೀಕೃತಿಪತ್ರವನ್ನು ಹಾಜರುಪಡಿಸಿದ್ದಾರೆ ಹಾಗೂ ಅದುದರಿಂದ, ಅವರು ದಾವೆಯನ್ನು ವಜಾ ಮಾಡಲು ಕೋರಿದ್ದಾರೆ.

12. ಮೇಲೆ ಹೇಳಿದ ವಾದಗಳ ಆಧಾರದ ಮೇಲೆ, ಅಧಿವಿಚಾರಣಾ ನ್ಯಾಯಾಲಯವು ಈ ಕೆಳಗಿನ ವಿವಾದಾಂಶಗಳನ್ನು ರೂಪಿಸಿದೆ:

*"1. ದಿನಾಂಕ 18/6/1991 ರಂದು ಇದ್ದಂತೆ ಪ್ರತಿವಾದಿಯು ರೂ. 63,14,980,57/- ಗಳ ಮೊತ್ತವನ್ನು ಬಾಕಿ ಕೊಡಬೇಕಿತ್ತೆಂದು ವಾದಿಯು ಸಾಬೀತು ಮಾಡುತ್ತದೆಯೆ ?*

*2. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಒಪ್ಪಿಗೆಯೊಂದಿಗೆ ಸಂದಾಯದ ಅವಧಿಯನ್ನು ವಿಸ್ತರಿಸಿತ್ತೆಂಬುದನ್ನು ವಾದಿಯು ಸಾಬೀತು ಮಾಡುತ್ತದೆಯೆ ?*

3. ಎಐಆರ್ 2002 ಎಸ್‌ಸಿ 2973

*3. ದಾವೆಯು ಕಾಲ ಪರಿಮಿತಿಯಿಂದ ನಿರ್ಬಂಧಿತವಾಗಿದೆಯೆ ?*

*4. ಸರ್ಕಾರದ ಮಧ್ಯಸ್ಥಿಕೆಯಲ್ಲಿ ವಾದಿಯು ಕ್ಲೇಮಿನ ಸಂಪೂರ್ಣ ಮತ್ತು ಅಂತಿಮ ಇತ್ಯರ್ಥದಲ್ಲಿ 28/11/2005 ರಂದು 87.22 ಲಕ್ಷ ರೂ. ಗಳನ್ನು ಸ್ವೀಕರಿಸಿದ್ದಾರೆಂದು ಹಾಗೂ ದಾಖಲೆಗಳನ್ನು ಬಿಡುಗಡೆ ಮಾಡಿದ್ದಾರೆಂದು 1 ನೇ ಪ್ರತಿವಾದಿಯು ಸಾಬೀತು ಪಡಿಸುತ್ತದೆಯೆ ?*

*5. ಯಾವ ಆದೇಶ ಅಥವಾ ಡಿಕ್ರಿ ?"*

13. ವಾದಿಯು ತನ್ನ ಕ್ಲೇಮನ್ನು ರುಜವಾತುಪಡಿಸುವ ಸಲುವಾಗಿ ಕರಿಬಸವಯ್ಯ ಎಂಬುವವರನ್ನು ಪಿ.ಡಬ್ಲ್ಯು. 1 ಎಂದು ವಿಚಾರಣೆ ಮಾಡಿರುತ್ತಾರೆ ಮತ್ತು ನಿಶಾನೆ ಪಿ.1 ರಿಂದ ಪಿ.34 ರವರೆಗೆ ಇರುವಂತೆ 34 ದಸ್ತಾವೇಜುಗಳನ್ನು ಹಾಜರುಪಡಿಸಿರುತ್ತಾರೆ. ಪ್ರತಿವಾದಿಯ ಕಡೆಯಿಂದ ಆನಂದ್ ಎಂಬುವವರನ್ನು ಡಿ.ಡಬ್ಲ್ಯು.1 ಎಂದು ವಿಚಾರಣೆ ಮಾಡಿರುತ್ತಾರೆ ಹಾಗೂ ಕಾಳೇಗೌಡ ಎಂಬುವವರನ್ನು ಡಿ.ಡಬ್ಲ್ಯು. 2 ಎಂದು ವಿಚಾರಣೆ ಮಾಡಿರುತ್ತಾರೆ ಹಾಗೂ ಎಂಟು ದಸ್ತಾವೇಜುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆ ಡಿ. 1 ರಿಂದ ಡಿ. 8 ಎಂದು ಗುರುತು ಮಾಡಲಾಗಿತ್ತು.

14. 1 ನೇ ಪ್ರತಿವಾದಿಯು ವಾದಿಗೆ 87.22 ಲಕ್ಷ ರೂ.ಗಳನ್ನು ಸಂದಾಯ ಮಾಡುವುದಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಪಕ್ಷಕಾರರು ವಿವಾದದಲ್ಲಿಲ್ಲವೆಂದು, ಮೌಖಿಕ ಮತ್ತು ದಾಖಲೆಯಲ್ಲಿನ ದಸ್ತಾವೇಜೀಯ ಸಾಕ್ಷ್ಯದ ಗುಣಾವಗುಣಗಳ ವಿವೇಚನೆಯ ಆಧಾರದ ಮೇಲೆ ಅಧಿವಿಚಾರಣಾ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಸದರಿ ಸಂದಾಯವು ವಾದಿಯ ಕ್ಲೇಮಿನ ಸಂಪೂರ್ಣ ಹಾಗೂ ಅಂತಿಮ ಇತ್ಯರ್ಥಕ್ಕಾಗಿ ಮಾಡಿದ್ದಾಗಿತ್ತು. ಪಕ್ಷಕಾರರು ಸರ್ಕಾರದ ಮಧ್ಯಸ್ಥಿಕೆಯಲ್ಲಿ ವಿಷಯವನ್ನು ಇತ್ಯರ್ಥಗೊಳಿಸಲು ಉದ್ದೇಶಿಸಿದ್ದರು ಹಾಗೂ ಅಂತಿಮವಾಗಿ ವಿಷಯವನ್ನು ಇತ್ಯರ್ಥಗೊಳಿಸಿದರೆಂದು ನಿಶಾನೆ ಪಿ. 33 ತೋರಿಸಿರುತ್ತದೆ. ವಿವಾದದಲ್ಲಿರದಿದ್ದ

ನಿಶಾನೆ ಡಿ.1 ಮತ್ತು ಡಿ.3ಗಳು ಮೇಲೆ ಹೇಳಿದ ಮೊತ್ತದ ಸಂದಾಯವನ್ನು ತೋರಿಸಿರುತ್ತದೆ. ನಿಶಾನೆ ಪಿ. 34 ರ ಕಾರಣದಿಂದಲೇ ದಾವೆಯನ್ನು ಹೂಡಲಾಗಿರುತ್ತದೆ ಮತ್ತು ಆದುದರಿಂದ, 18/06/1991 ರಂದು ಇದ್ದಂತೆ ಪ್ರತಿವಾದಿಗಳಿಂದ ರೂ. 63,14,980.57 ಪೈಸೆ. ಮೊತ್ತ ಬಾಕಿ ಬರಬೇಕಿತ್ತೆಂದು ಸಾಬೀತುಪಡಿಸಲು ವಾದಿಯು ವಿಫಲರಾಗಿದ್ದರೆಂದು 1 ರಿಂದ 4ನೇ ವಿವಾದಾಂಶಗಳಿಗೆ ಉತ್ತರಿಸಲಾಗಿರುತ್ತದೆ. ಸರ್ಕಾರದ ಮಧ್ಯಸ್ಥಿಕೆಯಲ್ಲಿ ವಾದಿಯು ಕ್ಲೇಮುಗಳ ಪೂರ್ಣ ಮತ್ತು ಅಂತಿಮ ಇತ್ಯರ್ಥವಾಗಿ ಹಾಗೂ ಅದರ ಆಧಾರದ ಮೇಲೆ ಪರಿಹಾರವಾಗಿ 28/11/2009 ರಂದು 87.22 ಲಕ್ಷ ರೂ. ಗಳನ್ನು ಸ್ವೀಕರಿಸಿದ್ದರೆಂದು 1ನೇ ಪ್ರತಿವಾದಿಯು ಸಾಬೀತುಪಡಿಸಿದ್ದರೆಂದು ಸಹ ಅಧಿವಿಚಾರಣಾ ನ್ಯಾಯಾಲಯವು ಅಭಿಪ್ರಾಯ ಪಟ್ಟಿತ್ತು. ಕಾಲ ಪರಿಮಿತಿಗೆ ಸಂಬಂಧಿಸಿದ ವಿವಾದಾಂಶವು ಸಂಬಂಧ ಪಡುವಷ್ಟರಮಟ್ಟಿಗೆ. ದಾವೆಯು ಕಾಲಾವಧಿಯಿಂದ ನಿರ್ಬಂಧಿತವಾಗಿತ್ತೆಂದು ಅಭಿಪ್ರಾಯಪಡಲಾಗಿತ್ತು. ಅದೇ ರೀತಿ, ಎರಡನೇ ಪ್ರತ್ಯಪೀಲುದಾರನಿಗೆ ವಾದಿಯು ನೀಡಿದ ಸಮಯದ ವಿಸ್ತರಣೆಗಾಗಿನ ಕೋರಿಕೆಯು ಮೊದಲನೇ ಪ್ರತಿವಾದಿಯನ್ನು ಬದ್ಧಗೊಳಿಸುವುದಿಲ್ಲ ಮತ್ತು ಆದುದರಿಂದ, ಆ ಲೆಕ್ಕಾಚಾರದಲ್ಲೂ ಸಹ, ದಾವೆಯನ್ನು ಕಾಲಪರಿಮಿತಿಯಿಂದ ನಿರ್ಬಂಧಿಸಲಾಗಿತ್ತು. ತದನುಸಾರವಾಗಿ, ವಾದಿಯ ದಾವೆಯನ್ನು ವಜಾ ಮಾಡಲಾಗಿತ್ತು. ಅಧಿವಿಚಾರಣಾ ನ್ಯಾಯಾಲಯದ ಸದರಿ ತೀರ್ಪು ಹಾಗೂ ಐತೀರ್ಪಿನಿಂದ ಬಾಧಿತವಾಗಿ, ವಾದಿಯು ಈ ಅಪೀಲನ್ನು ಸಲ್ಲಿಸಿತು.

15. ವಾದಿಯ ಪರ ಹಾಜರಾದ ಮಾನ್ಯ ವಕೀಲರು ಪ್ರಶ್ನಿತ ತೀರ್ಪು ಮತ್ತು ಡಿಕ್ರಿಯನ್ನು ಖಂಡಿಸಿ, ವ್ಯವಹರಣೆಗಳ ಇತ್ಯರ್ಥದ ಅವಧಿಯಲ್ಲಿ ಪಕ್ಷಕಾರರ ನಡುವೆ ಯಾವುದೇ ಪರಿಣಾಮಕಾರಿ ರಾಜಿ ಸಂಧಾನ ಆಗಬೇಕಿದ್ದಲ್ಲಿ, ಅದನ್ನು ಲಿಖಿತ ರೂಪಕ್ಕೆ ಇಳಿಸಬೇಕಿತ್ತು ಮತ್ತು ಸದರಿ ಒಪ್ಪಂದದ ವಿಷಯದಲ್ಲಿ ಡಿಕ್ರಿ ಹೊರಡಿಸಲು ಕೋರಿಕೆಯೊಂದಿಗೆ ಅದನ್ನು ನ್ಯಾಯಾಲಯದ ಗಮನಕ್ಕೆ ತರಬೇಕಿತ್ತು. ಹಾಗಿಲ್ಲದಿದ್ದಲ್ಲಿ, ಸದರಿ ಒಪ್ಪಂದಕ್ಕೆ ಯಾವುದೇ ಬೆಲೆಯಿಲ್ಲ ಮತ್ತು ನ್ಯಾಯಾಲಯವು ಪ್ರಕರಣವನ್ನು ಗುಣಾವಗುಣಗಳ ಆಧಾರದ ಮೇಲೆ ನಿರ್ಧರಿಸಬೇಕೆಂದು ವಾದವನ್ನು ಮಂಡಿಸಿದ್ದಾರೆ. ಅಲ್ಲದೆ, ನಿಶಾನೆ ಪಿ. 33 ರಲ್ಲಿ ಸರ್ಕಾರವು ವಿಷಯವನ್ನು ರಾಜಿ ಸಂಧಾನ ಮಾಡಲು ಮತ್ತು ಪಾವತಿಸಬೇಕಾದ ಮೊತ್ತವನ್ನು ಇತ್ಯರ್ಥಪಡಿಸಲು ನಿರ್ದೇಶನಗಳನ್ನು

ನೀಡಿದ್ದರೂ ಸಹ, ತರುವಾಯ ನಿಶಾನೆ. ಪಿ. 33 ರ ಅನುಸಾರ ಅದನ್ನು ಹಿಂತೆಗೆದುಕೊಳ್ಳಲಾಗಿದೆ. ಆದುದರಿಂದ, ಪಕ್ಷಕಾರರ ನಡುವೆ ಯಾವುದೇ ಸಿಂಧುವಾದ ಒಪ್ಪಂದ ಅಥವಾ ರಾಜಿ ಸಂಧಾನವಾಗಿರಲಿಲ್ಲ ಹಾಗೂ ಅದರಂತೆ, ದಾವೆಯನ್ನು ವಜಾ ಮಾಡುವಲ್ಲಿ ಕೆಳನ್ಯಾಯಾಲಯವು ಸಮರ್ಥಿತವಾಗಿರಲಿಲ್ಲ. ಕಾಲಪರಿಮಿತಿಯ ಪ್ರಶ್ನೆಯ ಮೇಲೆ, ಅವರು ಪಕ್ಷಕಾರರ ನಡುವೆ ಪತ್ರ ವ್ಯವಹಾರ, ಎರಡನೇ ಪ್ರತಿವಾದಿಯು ನೀಡಿದ ಅವಧಿ ವಿಸ್ತರಣೆ ಮತ್ತು ಈ ನ್ಯಾಯಾಲಯವು ಮಧ್ಯಂತರ ಆದೇಶವನ್ನು ಹೊರಡಿಸಿದೆಯೆಂಬ ಸಂಗತಿ ಇವುಗಳನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ. ದಾವೆಯನ್ನು ನಿಗದಿತ ಕಾಲಾವಧಿಯೊಳಗೆ ಸಲ್ಲಿಸಲಾಗಿದೆ ಹಾಗೂ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವು ದೋಷಪೂರ್ಣವಾಗಿದೆ ಎಂದು ನಿವೇದಿಸಿದ್ದಾರೆ.

16. ಅದಕ್ಕೆ ವಿರುದ್ಧವಾಗಿ, ಮೊದಲನೇ ಪ್ರತಿವಾದಿಯ ಪರ ಹಾಜರಾದ ಮಾನ್ಯ ವಕೀಲರು, ಸಂಗತಿಗಳು ವಿವಾದದಲ್ಲಿಲ್ಲ. ದಾವೆಯನ್ನು ಹೂಡಿದ ನಂತರ, ಸರ್ಕಾರದ ಮಧ್ಯಸ್ಥಿಕೆಯಲ್ಲಿ, ವಿವಾದವು ಇತ್ಯರ್ಥವಾಗಿದೆ, ಇತ್ಯರ್ಥಕ್ಕೆ ಸಂಬಂಧಿಸಿದಂತೆ ಋಣವಿಮೋಚಕನು 87.22 ಲಕ್ಷ ರೂ. ಗಳ ಸಂದಾಯವನ್ನು ಕೋರಿ ನಿಶಾನೆ ಡಿ.3 ನ್ನು ಬರೆದಿರುತ್ತಾನೆ. ಆ ಮೊತ್ತವನ್ನು ಸಂದಾಯ ಮಾಡಿದ್ದು, ನಿಶಾನೆ ಡಿ.1 ರ ಅನುಸಾರ ಅವರು ಅದನ್ನು ಯುಕ್ತವಾಗಿ ಸ್ವೀಕರಿಸಿರುತ್ತೇನೆಂದು ಒಪ್ಪಿದ್ದಾರೆ. ಹೀಗಾಗಿ, ವಾದಿಯ ಇಡೀ ಕ್ಲೇಮನ್ನು ಪೂರ್ಣವಾಗಿ ಋಣಸಂದಾಯ ಮಾಡಲಾಗಿದೆ ಮತ್ತು ನಿಶಾನೆ ಡಿ.1ರ ಒಳಾಂಶಗಳಿಂದ ಸ್ಪಷ್ಟವಾಗಿರುವಂತೆ ವಾದಿಯ ಕ್ಲೇಮಿನ ಪೂರ್ಣ ಹಾಗೂ ಅಂತಿಮ ಇತ್ಯರ್ಥಕ್ಕಾಗಿ ಮೇಲೆ ಹೇಳಿದ ಮೊತ್ತದ ಸಂದಾಯವನ್ನು ಮಾಡಲಾಗಿತ್ತು ಎಂದು ನಿವೇದಿಸಿದ್ದಾರೆ. ಅಲ್ಲದೆ, ಅವರು ಬ್ಯಾಂಕು ಮೂರು ವಿಸ್ತರಣೆಗಳಿಗೆ ಅಥವಾ ಮುಂದಿನ ವಿಸ್ತರಣೆಗಳಿಗಾಗಿ ಒಪ್ಪಿರಲಿಲ್ಲವೆಂದು ನಿವೇದಿಸಿದ್ದಾರೆ. ಕೊನೆಯ ವಿಸ್ತರಣೆಯಲ್ಲಿ ಅವರು ಬಾಕಿ ಕೊಡಬೇಕಾದ ಮೊತ್ತವನ್ನು ಖಚಿತ ಪಡಿಸಿದ್ದಾರೆ. ಬ್ಯಾಂಕಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಅದು ಕಾಲ ಪರಿಮಿತಿಯ ಪ್ರಾರಂಭಿಕ ಅಂಶವಾಗಿದೆ. ಹೀಗಾಗಿ, ಕಾಲಾವಧಿಯಿಂದ ದಾವೆಯನ್ನು ನಿಷೇಧಿಸಲಾಗಿದೆ. ಹಾಗಿಲ್ಲದಿದ್ದರೂ ಸಂಕೀರ್ಣ ಮೊದಲನೇ ಅಪೀಲಿನಲ್ಲಿ (M.F.A) ಈ ನ್ಯಾಯಾಲಯವು ಹೊರಡಿಸಿದ ಮಧ್ಯಂತರ ಆದೇಶವನ್ನು ತೆರವುಗೊಳಿಸಲಾಗಿತ್ತು. ಅಲ್ಲಿಂದ ಮೂರು

ವರ್ಷಗಳೊಳಗಾಗಿ ದಾವೆ ಹೂಡಲೇಬೇಕಿತ್ತು. ಕಾಲಮಿತಿಯನ್ನು ಮೀರಿ ದಾವೆಯನ್ನು ಹೂಡಲಾಗಿದೆ ಮತ್ತು ಅದರಂತೆ, ದಾವೆಯನ್ನು ಕಾಲಪರಿಮಿತಿಯಿಂದ ನಿಷೇಧಿಸಲಾಗಿದೆ ಎಂಬ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವು ಸರಿಯಾಗಿದೆ.

17. ಎರಡನೇ ಪ್ರತಿವಾದಿಯ ಪರ ಹಾಜರಾದ ಮಾನ್ಯ ವಕೀಲರು ಮೊದಲನೇ ಪ್ರತಿವಾದಿಯ ಪರ ಹಾಜರಾದ ಮಾನ್ಯ ವಕೀಲರ ವಾದಗಳನ್ನು ಅಂಗೀಕರಿಸಿದ್ದಾರೆ.

18. ಮೇಲೆ ಹೇಳಿದ ಸಂಗತಿಗಳ ಮತ್ತು ಪರಸ್ಪರ ವಿರೋಧದ ವಾದಗಳ ಬೆಳಕಿನಲ್ಲಿ, ಈ ಅಪೀಲಿನಲ್ಲಿ ನಮ್ಮ ಪರಿಗಣನೆಗಾಗಿ ಉದ್ಭವಿಸುವ ವಿವಾದಾಂಶಗಳು ಈ ಕೆಳಗಿನಂತಿವೆ.

> *(i) ಸಿವಿಲ್ ಪ್ರಕ್ರಿಯಾ ಸಂಹಿತೆಯ 23ನೇ ಕ್ರಮಾದೇಶದ 3 ನೇ ನಿಯಮದ ಮೇರೆಗೆ ಅರ್ಜಿಯ ಮುಖಾಂತರ ಸದರಿ ಒಪ್ಪಂದ ಅಥವಾ ರಾಜಿಯನ್ನು ಲಿಖಿತ ರೂಪಕ್ಕೆ ಇಳಿಸದಿದ್ದರೂ, ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಪಕ್ಷಕಾರರ ನಡುವೆ ಮಾಡಿಕೊಂಡ ರಾಜಿಯ ಆಧಾರದ ಮೇಲೆ ವಾದಿಗಳ ಕ್ಲೇಮನ್ನು ಸಂಪೂರ್ಣವಾಗಿ ತೀರಿಸಲಾಗಿದೆಯೆಂದು ತೀರ್ಮಾನಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯವು ಸಮರ್ಥಿತವಾಗಿದೆಯೇ ?*

> *(ii) ದಾವೆಯನ್ನು ಕಾಲಪರಿಮಿತಿಯಿಂದ ನಿಷೇಧಿಸಲಾಗಿದೆ ಯೆಂಬ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವು ಸಿಂಧುವಾಗಿದಯೆ? ಅಥವಾ ಇಲ್ಲವೆ?*

**ವಿವಾದಾಂಶ ಸಂಖ್ಯೆ (1):**

19. ದಿನಾಂಕ 18/06/91 ರಂದು ಇದ್ದಂತೆ ಪ್ರತಿವರ್ಷಕ್ಕೆ ಶೇ. 14ರ ದರದಲ್ಲಿ ಬಡ್ಡಿಯೊಂದಿಗೆ ಪಾವತಿಸಬೇಕಿದ್ದ ರೂ. 59,01,851/– ಗಳ ಕೊನೆಯ ಕಂತು

ಸೇರಿ ಒಟ್ಟು ರೂ.63,14,980.57 ಪೈಸೆ ಮೊತ್ತವನ್ನು ವಸೂಲಿ ಮಾಡಲು ವಾದಿಯು ದಾವೆಯನ್ನು ಹೂಡಿದ್ದಾನೆ. ಮೊದಲನೇ ಪ್ರತಿವಾದಿಯು ಖಾತರಿದಾರನಾಗಿ ನಿಂತಿರುವುದರಿಂದ ಹಾಗೂ ಎರಡನೇ ಪ್ರತಿವಾದಿಗೆ ನೀಡಲಾದ ಬ್ಯಾಂಕ್ ಖಾತರಿಗೆ ಸಂಬಂಧಿಸಿದಂತೆ, ಅವರು ಮರು ಮಾತಾಡದೆ ಸದರಿ ಮೊತ್ತವನ್ನು ಪಾವತಿಸಲೇಬೇಕಿತ್ತು. ಮೊದಲನೇ ಪ್ರತಿವಾದಿಯು ಸದರಿ ಮೊತ್ತವನ್ನು ಪಾವತಿಸಲು ಸಿದ್ಧನಾಗಿದ್ದನು ಆದರೆ, ಎರಡನೇ ಪ್ರತಿವಾದಿಯು ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿ ಸಲ್ಲಿಸುವ ಮೂಲಕ ಬ್ಯಾಂಕ್ ಖಾತರಿ ಕೋರಿರುವುದನ್ನು ಪ್ರಶ್ನಿಸಿದ್ದಾರೆ ಮತ್ತು ಸದರಿ ಮೊತ್ತದ ಪಾವತಿಯನ್ನು ತಡೆಯುವ ಮಧ್ಯಂತರ ತಡೆಯಾಜ್ಞೆಯನ್ನು ಪಡೆದುಕೊಂಡಿದ್ದಾರೆಂಬುದನ್ನು ದಾಖಲೆಯಲ್ಲಿರುವ ಸಾಕ್ಷ್ಯವು ತೋರಿಸುತ್ತದೆ. ರಿಟ್ ಅರ್ಜಿಯನ್ನು ವಜಾಗೊಳಿಸಿದ ನಂತರ, ಬ್ಯಾಂಕನ್ನು ಹಾಗೂ ವಾದಿಯನ್ನು ಬ್ಯಾಂಕ್ ಖಾತರಿ ಕೋರುವುದರಿಂದ ನಿಗ್ರಹಿಸಲು ಎರಡನೇ ಪ್ರತಿವಾದಿಯು ಶಾಶ್ವತ ನಿರ್ಬಂಧಕಾಜ್ಞೆಗಾಗಿ ದಾವೆ ಹೂಡಿರುತ್ತಾರೆ. ಸದರಿ ದಾವೆಯಲ್ಲಿ, ಬ್ಯಾಂಕ್ ಖಾತರಿ ಕೋರುವುದನ್ನು ನಿಗ್ರಹಿಸುವ ಮಧ್ಯಂತರ ಆದೇಶವಿತ್ತು. ಹೀಗಾಗಿ, ಮತ್ತೊಮ್ಮೆ ಮೊದಲ ಪ್ರತ್ಯರ್ಜಿದಾರ–ಬ್ಯಾಂಕನ್ನು ಪಾವತಿ ಮಾಡುವುದರಿಂದ ತಡೆಯಲಾಗಿತ್ತು ನಂತರ, ಸದರಿ ಆದೇಶವನ್ನು ತೆರವುಗೊಳಿಸಲಾಗಿತ್ತು ಮತ್ತು ಅದನ್ನು ಸಂಕೀರ್ಣ ಮೊದಲನೇ ಅಪೀಲಿನಲ್ಲಿ ಈ ನ್ಯಾಯಾಲಯದ ಮುಂದೆ ಪ್ರಶ್ನಿಸಲಾಗಿದ್ದು ಅದರಲ್ಲಿ ಮತ್ತೊಮ್ಮೆ ಮಧ್ಯಂತರ ಆದೇಶವನ್ನು ಹೊರಡಿಸಿದ್ದು ಅದು ಮೊದಲನೇ ಪ್ರತಿವಾದಿಯು ಪಾವತಿ ಮಾಡುವುದಕ್ಕೆ ಅಡ್ಡಿಯಾಯಿತು. ಸದರಿ ಆದೇಶವನ್ನು ತೆರವುಗೊಳಿಸಿದ ನಂತರ ಮಾತ್ರವೇ, ಹಣ ಪಾವತಿಸಲು ಬ್ಯಾಂಕಿಗೆ ಯಾವುದೇ ಅಡಚಣೆಯಿರಲಿಲ್ಲ. ಆದಾಗ್ಯೂ ವಾದಿಯು ಕೊನೇ ಕಂತಿನ ಮೇಲೆ ಬಡ್ಡಿಯನ್ನು ಕ್ಲೇಮು ಮಾಡಿದ್ದು, ಮೊದಲನೇ ಪ್ರತಿವಾದಿಯು ಅದನ್ನು ನಿರಾಕರಿಸಿರುತ್ತಾರೆ. ಮೊದಲನೇ ಪ್ರತಿವಾದಿಯ ಪ್ರಕಾರ, ಅವನನ್ನು ಹಣ ಪಾವತಿ ಮಾಡುವುದರಿಂದ ತಡೆದದ್ದು ನ್ಯಾಯಾಲಯಗಳು ಹೊರಡಿಸಿದ ಮಧ್ಯಂತರ ಆದೇಶಗಳೇ ಆಗಿವೆ. ಅದು ಅವರ ತಪ್ಪಲ್ಲ. ಅದುದರಿಂದ, ಮಧ್ಯಂತರ ಆದೇಶಗಳು ಜಾರಿಯಲ್ಲಿದ್ದ ಅವಧಿಯ ಬಡ್ಡಿಯನ್ನು ಅವರು ಪಾವತಿಸಬೇಕಾಗಿಲ್ಲ ವಾದಿಯು ಇದಕ್ಕೆ ಒಪ್ಪದಿದ್ದ ಕಾರಣ, 7,58,31,272/– ರೂ. ಗಳ ಮೊತ್ತವನ್ನು ಕ್ಲೇಮು ಮಾಡಿ ದಾವೆಯನ್ನು ಸಲ್ಲಿಸಲಾಗಿತ್ತು, ಮೊದಲನೇ ಪ್ರತಿವಾದಿಯು

ಲಿಖಿತ ಹೇಳಿಕೆಯನ್ನು ದಾಖಲಿಸಿ ವಿಷಯವನ್ನು ಪ್ರತಿವಾದಿಸಿದರು. ಎರಡನೇ ಪ್ರತಿವಾದಿಯನ್ನು ಪಕ್ಷಕಾರನ್ನಾಗಿ ಸೇರಿಸಿಕೊಳ್ಳಲಾಯಿತು ಮತ್ತು ಅವರು ಮೊದಲನೇ ಪ್ರತಿವಾದಿಗೆ ಬೆಂಬಲ ನೀಡಿದ್ದನು ಈ ವ್ಯವಹರಣೆಗಳ ಇತ್ಯರ್ಥದ ಅವಧಿಯಲ್ಲಿ ಸರ್ಕಾರವು ಮಧ್ಯಪ್ರವೇಶ ಮಾಡಿತು. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ ಇವರು ಋಣವಿಮೋಚಕನ ಹಿತಾಸಕ್ತಿಯಲ್ಲಿ ಹಾಗೂ ಅಂತಿಮವಾಗಿ ಸರ್ಕಾರದಿಂದ ದಿನಾಂಕ 16.07.2001 ರಂದು ಕೈಗೊಳ್ಳಲಾದ ನಿರ್ಣಯದ ಅನುಸಾರ ವಿಷಯವನ್ನು ಇತ್ಯರ್ಥಪಡಿಸಲಾಗುವುದು ಹಾಗೂ ಮೊತ್ತವನ್ನು ಒಂದೇ ಬಾರಿಗೆ ಪಾವತಿಸಲಾಗುವುದು ಎಂದು ನಿರ್ದೇಶಿಸಿ, ವಾದಿಗೆ ನಿಶಾನೆ ಪಿ.33 ಅನುಸಾರ 23.07.2005 ರ ಪತ್ರವನ್ನು ಕಳುಹಿಸಿರುತ್ತಾರೆ. ಸಿವಿಲ್ ವ್ಯಾಜ್ಯೆ ಮತ್ತು B.I.F.R. ಹಲವಾರು ವರ್ಷಗಳನ್ನು ತೆಗೆದುಕೊಂಡರೂ ನಿರೀಕ್ಷಿತ ಫಲಿತಾಂಶ ದೊರೆತಿಲ್ಲ. ಆ ನಂತರ ಅಪೀಲು ಹೋಗುವ ಅವಕಾಶಗಳಿದ್ದವು. ಆದುದರಿಂದ, ಇದನ್ನು ‘‘ನ್ಯಾಯಾಲಯದ ಹೊರಗೆ ಇತ್ಯರ್ಥ’’ ವೆಂದು ವಿಷಯುವನ್ನು ಇತ್ಯರ್ಥಪಡಿಸುವುದು ಮತ್ತು ಈಗಾಗಲೇ ಕೈಗೊಂಡ ಸರ್ಕಾರದ ನಿರ್ಣಯವನ್ನು ಎಂದರೆ, ಋಣ ಸಮಾಪಕನು ಖರೀದಿದಾರನಿಂದ ಬಡ್ಡಿ ಸೇರಿದಂತೆ ಬಾಕಿ ವಸೂಲಿ ಮಾಡುವುದು ಮತ್ತು ದಾಖಲೆಗಳನ್ನು ಹಸ್ತಾಂತರಿಸುವುದನ್ನು ಕಾರ್ಯರೂಪಕ್ಕೆ ತರುವುದು ಉತ್ತಮವಾಗಿರುತ್ತದೆ. ಬಡ್ಡಿಯೊಂದಿಗೆ ಹಣದ ಮೊತ್ತವು 87.22 ಲಕ್ಷ ರೂ. ಗಳಾಗುತ್ತದೆ. 5.86 ಲಕ್ಷ ರೂ. ಗಳ ಮೊತ್ತವನ್ನು ಈಗಾಗಲೇ ಸಿವಿಲ್ ನ್ಯಾಯಾಲಯದಲ್ಲಿ ಠೇವಣಿ ಮಾಡಿರುವುದರಿಂದಾಗಿ ಒಂದು ವೇಳೆ ಸದರಿ 5.86 ಲಕ್ಷ ರೂ. ಮೊತ್ತವನ್ನು ಮರು ಪಾವತಿ ಮಾಡದಿದ್ದರೆ, ಅದನ್ನು ಖರೀದಿದಾರನು ಪಾವತಿಸಲು ಹೊಣೆಯಾಗಿರುತ್ತಾನೆ. ಸದರಿ ಪತ್ರವನ್ನು ಸ್ವೀಕರಿಸಿದ ಮೇಲೆ, ಮೊದಲನೇ ಪ್ರತಿವಾದಿ–ಬ್ಯಾಂಕು ಎರಡನೇ ಪ್ರತಿವಾದಿಯಿಂದ ಬಾಕಿಗಳ ಸಂಪೂರ್ಣ ಮತ್ತು ಅಂತಿಮ ಇತ್ಯರ್ಥಕ್ಕಾಗಿ 87.22 ಲಕ್ಷ ರೂ. ಗಳಿಗೆ ಸಂಖ್ಯೆ. 4648 ದಿನಾಂಕ 26–11–2005 ರ ಪಾವತಿ ಆದೇಶವನ್ನು ಕಳುಹಿಸಿದೆ. ನಿಶಾನೆ ಡಿ. 1ರ ಪ್ರಕಾರ ವಾದಿಯು ಸದರಿ ಪಾವತಿ ಹಾಗೂ ಪತ್ರವನ್ನು ಸ್ವೀಕರಿಸಿದೆ. ಸಿವಿಲ್ ನ್ಯಾಯಾಲಯದಲ್ಲಿ ಮೊತ್ತವನ್ನು ಪಾವತಿಸುವ ವಿಷಯವು ಇತ್ಯರ್ಥವಾಗುವವರೆಗೂ ಅವರನ್ನು ತಮ್ಮ ವಶದಲ್ಲಿರಿಸಿಕೊಳ್ಳಬೇಕೆಂದು ಕೋರಿ ಎಲ್ಲಾ ಮೂಲ ದಾಖಲೆಗಳನ್ನು ಅವುಗಳ ಪಟ್ಟಿಯೊಂದಿಗೆ ಬ್ಯಾಂಕಿಗೆ ಕಳುಹಿಸಲಾಯಿತು.

20. ಮೇಲೆ ಹೇಳಲಾದ ನಿರ್ವಿವಾದಿತ ಪತ್ರ ವ್ಯವಹಾರದಿಂದ ದಾವೆಯ ಇತ್ಯರ್ಥದ ಅವಧಿಯಲ್ಲಿ ಪಕ್ಷಕಾರರು ಒಪ್ಪಂದ ಮಾಡಿಕೊಳ್ಳುವ ಕ್ಲೇಮನ್ನು ಇತ್ಯರ್ಥಗೊಳಿಸಲು ಒಪ್ಪಿಕೊಂಡಿರುತ್ತಾರೆ. ತದನುಸಾರವಾಗಿ ಹಣ ಪಾವತಿಯನ್ನು ಮಾಡಲಾಯಿತು. ಅಂಥ ಮೊತ್ತದ ಪಾವತಿಯ ಮೇಲೆ ವಾದಿಯ ಇಡೀ ಕ್ಲೇಮು ಪೂರ್ಣವಾಗಿ ನೆರವೇರಿದೆ. ಈ ಪಾವತಿಯನ್ನು ಮಾಡಿದ ಮತ್ತು ಋಣದ ತೀರಿಕೆಯಾದ ನಂತರ, ನಿಶಾನೆ ಪಿ. 34 ನ್ನು 23–05–2008 ರಂದು ನೀಡಲಾಗಿದೆ ಹಾಗೂ ದಿನಾಂಕ 23–07–05 ರ ಪತ್ರವನ್ನು, ಎಂದರೆ ನಿಶಾನೆ ಪಿ.33 ನ್ನು ಹಿಂಪಡೆಯಲಾಗಿದೆಯೆಂದು ವಾದಿಗೆ ತಿಳಿಸಿ ಪತ್ರ ಬರೆಯಲಾಗಿದೆ ಮತ್ತು ಈ ವಿಷಯದಲ್ಲಿ ಅವರು ಕಾನೂನು ಪ್ರಕಾರ ಕ್ರಮ ಕೈಗೊಳ್ಳಬಹುದೆಂದು ವಾದಿಗೆ ತಿಳಿಸಲಾಯಿತು. ಸದರಿ ಪತ್ರದ ಕಾರಣದಿಂದಾಗಿ, ಇಡೀ ದಾವೆಯ ಕ್ಲೇಮನ್ನು ಯುಕ್ತವಾಗಿ ನೆರವೇರಿಸಿದ್ದರೂ ಸಹ ದಾವೆ ಹೂಡಲಾಗಿದೆ. ಈ ಸಂದರ್ಭದಲ್ಲಿಯೇ, ದಾವೆಯ ರಾಜಿಯೊಂದಿಗೆ ವ್ಯವಹರಿಸುವ ಶಾಸನಬದ್ಧ ಉಪಬಂಧವನ್ನು ಅವಲೋಕಿಸುವ ಅಗತ್ಯತೆಯಿದೆ.

21. ಸಿವಿಲ್ ಪ್ರಕ್ರಿಯಾ ಸಂಹಿತೆಯ 23 ನೇ ಕ್ರಮಾದೇಶದ 3 ನೇ ನಿಯಮವನ್ನು ಈ ಕೆಳಗಿನಂತೆ ಓದಲಾಗುತ್ತದೆ:

> *"**3. ದಾವೆಯ ರಾಜಿ**.– ಬರಹರೂಪದ ಮತ್ತು ಪಕ್ಷಕಾರರು ಸಹಿ ಮಾಡಿರುವ ಯಾವುದೇ ಕಾನೂನುಬದ್ಧ ಒಪ್ಪಂದದ ಮೂಲಕ ಅಥವಾ ರಾಜಿಯ ಮೂಲಕ ದಾವೆಯನ್ನು ಸಂಪೂರ್ಣವಾಗಿ ಅಥವಾ ಭಾಗಶ: ಹೊಂದಾಣಿಕೆ ಮಾಡಲಾಗಿದೆ ಎಂದು ನ್ಯಾಯಾಲಯಕ್ಕೆ ಮನದಟ್ಟಾಗುವಂತೆ ರುಜುವಾತುಪಡಿಸಿರುವಲ್ಲಿ, ಅಥವಾ ದಾವೆಯ ವಸ್ತು ವಿಷಯದ ಬಗ್ಗೆ ಪೂರ್ಣವಾಗಿ ಅಥವಾ ಅದರ ಯಾವುದೇ ಭಾಗದ ಸಂಬಂಧದಲ್ಲಿ ಪ್ರತಿವಾದಿಯು ವಾದಿಯನ್ನು ಸಮಾಧಾನಪಡಿಸಿರುವಲ್ಲಿ, ಅಂಥ ಒಪ್ಪಂದವನ್ನು, ರಾಜಿಯನ್ನು ಅಥವಾ ಸಮಾಧಾನವನ್ನು ಅಭಿಲೇಖಿಸಬೇಕೆಂದು ನ್ಯಾಯಾಲಯವು*

*ಆದೇಶಿಸತಕ್ಕದ್ದು, ಮತ್ತು ಅದಕ್ಕೆ ಅನುಗುಣವಾಗಿ ಡಿಕ್ರಿಯನ್ನು ಅದು ದಾವೆಯ ಪಕ್ಷಕಾರರಿಗೆ ಸಂಬಂಧಿಸುವಷ್ಟರ ಮಟ್ಟಿಗೆ, ಒಪ್ಪಂದದ, ರಾಜಿಯ ಅಥವಾ ಸಮಾಧಾನದ ವಸ್ತು ವಿಷಯವು ದಾವೆಯ ವಸ್ತು ವಿಷಯವೇ ಆಗಿರಲಿ ಅಥವಾ ಆಗಿರದಿರಲಿ, ಮಾಡತಕ್ಕದ್ದು:*

*ಪರಂತು, ಹೊಂದಾಣಿಕೆಯನ್ನು ಮಾಡಿಕೊಳ್ಳಲಾಗಿದೆ ಎಂದು ಒಂದು ಪಕ್ಷವು ಹೇಳಿದಲ್ಲಿ ಮತ್ತು ಇನ್ನೊಂದು ಪಕ್ಷವು ಅದನ್ನು ಅಲ್ಲಗಳೆದಲ್ಲಿ, ನ್ಯಾಯಾಲಯವು ಆ ಪ್ರಶ್ನೆಯನ್ನು ತೀರ್ಮಾನಿಸತಕ್ಕದ್ದು, ಆದರೆ ಅಭಿಲೇಖಿಸಬೇಕಾದ ಕಾರಣಗಳಿಗಾಗಿ ಮುದ್ದತ್ತನ್ನು ಕೊಡುವುದು ಸೂಕ್ತವೆಂದು ನ್ಯಾಯಾಲಯವು ಆಲೋಚಿಸಿದ ಹೊರತು ಆ ಪ್ರಶ್ನೆಯು ತೀರ್ಮಾನಕ್ಕಾಗಿ ಯಾವುದೇ ಮುದ್ದತ್ತನ್ನು ಕೊಡತಕ್ಕದ್ದಲ್ಲ.*

22. ಮೇಲೆ ಹೇಳಲಾದ ಉಪಬಂಧದಲ್ಲಿ ಬಳಸಲಾದ ಭಾಷೆಯು ದಾವೆಯನ್ನು ರಾಜಿ ಮಾಡಿಸುವ ಎರಡು ವಿಧಾನಗಳನ್ನು ಉಪಬಂಧಿಸುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ ಎಂದರೆ,

(i) ದಾವೆಯನ್ನು ಲಿಖಿತದಲ್ಲಿ ಯಾವುದೇ ಕಾನೂನುಬದ್ಧ ಒಪ್ಪಂದ ಅಥವಾ ರಾಜಿಯಿಂದ ಸಂಪೂರ್ಣವಾಗಿ ಅಥವಾ ಭಾಗಶಃ ಹೊಂದಾಣಿಕೆ ಮಾಡಿಸಿದಾಗ ಪಕ್ಷಕಾರರಿಂದ ಸಹಿ ಮಾಡಿಸುವುದು.

(ii) ಪ್ರತಿವಾದಿಯು ದಾವೆಯ ವಸ್ತು ವಿಷಯದ ಪೂರ್ಣ ಅಥವಾ ಯಾವುದೇ ಭಾಗಕ್ಕೆ ಸಂಬಂಧಿಸಿ ವಾದಿಗೆ ಮನವರಿಕೆ ಮಾಡಿಕೊಡುವುದು.

23. ದಾವೆಯನ್ನು ರಾಜಿ ಮಾಡಿಸುವ ಮೊದಲನೆಯ ಮತ್ತು ಬಹುಶಃ ಉತ್ತಮವಾದ ವಿಧಾನವು ಕಾನೂನುಬದ್ಧ ಒಪ್ಪಂದ ಅಥವಾ ರಾಜಿಯನ್ನು ಲಿಖಿತ ರೂಪಕ್ಕಿಳಿಸುವುದು ಹಾಗೂ ಅದಕ್ಕೆ ಪಕ್ಷಕಾರರ ಸಹಿ ಮಾಡಿಸುವುದಾಗಿದೆ. ಎರಡನೆಯ ವಿಧಾನವು ಅಂಥ ಲಿಖಿತ ಪತ್ರವಿಲ್ಲದೆ ಪ್ರತಿವಾದಿಯು ವಾದಿಯ ಕ್ಲೇಮನ್ನು ಪೂರ್ಣವಾಗಿ ಅಥವಾ ಭಾಗಶಃ ನೇರವೇರಿಸುವುದಾಗಿದೆ. ಶಾಸಕಾಂಗವು ಹೊಂದಾಣಿಕೆ (Adjustment) ಮತ್ತು ಮನವರಿಕೆ ಮಾಡಿಕೊಡುವಿಕೆ (Satisfaction) ಎಂಬ ಎರಡು ಪದಗಳನ್ನು ಪ್ರಜ್ಞಾಪೂರ್ವಕವಾಗಿ ಬಳಸಿದೆ. ದಾವೆಯ ಹೊಂದಾಣಿಕೆಯು ಲಿಖಿತದಲ್ಲಿದ್ದು, ಪಕ್ಷಕಾರರ ಸಹಿ ಹೊಂದಿರಬೇಕು. ಆದರೆ, ದಾವೆಯ ವಸ್ತು ವಿಷಯದ ಮನವರಿಕೆಗೆ ಸಂಬಂಧಪಟ್ಟಂತೆ ಅಂಥಹುದರ ಅಗತ್ಯತೆಯನ್ನು ನಿಗದಿಪಡಿಸಿಲ್ಲ. ಹೊಂದಾಣಿಕೆಯು ಕೊಡುವ ಮತ್ತು ತೆಗೆದುಕೊಳ್ಳುವ ಅಂಶವನ್ನು ಒಳಗೊಳ್ಳುತ್ತದೆ. (ಅಗತ್ಯವಾಗಿ ಒಳಗೊಳ್ಳಬಹುದು) ದಾವೆಯನ್ನು ಹೊಂದಾಣಿಕೆಗೆ ಒಳಪಡಿಸಿದಾಗ, ಎರಡೂ ಪಕ್ಷಕಾರರ ಮೇಲೆ ಪರಸ್ಪರ ಹೊಣೆಗಾರಿಕೆ ಇದ್ದಿರಬಹುದು. ಅಂಥ ಹೊಂದಾಣಿಕೆಯ ಆಧಾರದ ಮೇಲೆ, ಕಾರ್ಯಗತವಾಗಬಲ ಡಿಕ್ರಿಯನ್ನು ಹೊರಡಿಸಲು ಸಾಧ್ಯವಿರುತ್ತದೆ. ಆದುದರಿಂದ, ಅಂಥ ಹೊಂದಾಣಿಕೆಯಿಂದ ವಿವಾದವನ್ನು ಬಗೆಹರಿಸಲು ಎರಡೂ ಪಕ್ಷಕಾರರು ಪರಸ್ಪರ ಒಪ್ಪಿದಾಗ, ಒಪ್ಪಂದ ಅಥವಾ ರಾಜಿಯ ಪ್ರಕ್ರಿಯೆ ಅಥವಾ ನಿಬಂಧನೆಗಳನ್ನು ಕುರಿತ ವಾದವಿವಾದಗಳನ್ನು ಸಂಪೂರ್ಣವಾಗಿ ನಿವಾರಿಸಲಾಗದಿದ್ದರೂ, ಕಡಿಮೆ ಮಾಡುವ ದೃಷ್ಟಿಯಿಂದ ಅವುಗಳನ್ನು ಲಿಖಿತ ರೂಪದಲ್ಲಿರಿಸತಕ್ಕದು ಹಾಗೂ ಅದು ಪಕ್ಷಕಾರರ ಸಹಿಗಳನ್ನು ಹೊಂದಿರತಕ್ಕದ್ದೆಂದು ಕಾನೂನು ಕಡ್ಡಾಯಗೊಳಿಸಿರುತ್ತದೆ.

24. 'ಲಿಖಿತದಲ್ಲಿ' ಮತ್ತು 'ಪಕ್ಷಕಾರರಿಂದ ಸಿಹಿ ಮಾಡಿಸಿ' ಎಂಬ ಪದಗಳನ್ನು ಸೇರಿಸುವ ಮೂಲಕ 23ನೇ ಕ್ರಮಾದೇಶದ 3ನೇ ನಿಯಮದ ತಿದ್ದುಪಡಿಯ ಪೂರ್ಣ ಉದ್ದೇಶವೇನೆಂದರೆ, ಮೊದಲನೆಯದಾಗಿ, ಯಾವುದೇ ಕಾನೂನುಬದ್ಧ ಒಪ್ಪಂದ ಅಥವಾ ರಾಜಿಯಿಂದ ದಾವೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಹೊಂದಾಣಿಕೆ ಮಾಡಲಾಗಿರುತ್ತದೆಯೆಂಬ ಸುಳ್ಳು ಹಾಗೂ ಕ್ಷುಲ್ಲಕ ವಾದಗಳನ್ನು ನಿವಾರಿಸುವುದು, ಎರಡನೆಯದಾಗಿ, ದಾವೆಯ ವ್ಯವಹರಣೆಗಳನ್ನು ವೃಥಾ ಬೆಳೆಸುವುದನ್ನು ಅಥವಾ ವಿಳಂಬ ಮಾಡುವುದನ್ನು ತಪ್ಪಿಸುವುದು. ಅಂಥ

ಕಾನೂನುಬದ್ಧವಾದ ಒಪ್ಪಂದ ಅಥವಾ ರಾಜಿಯನ್ನು ಲಿಖಿತರೂಪಕ್ಕಿಳಿಸದಿದ್ದಲ್ಲಿ ಹಾಗೂ ಪಕ್ಷಕಾರರ ಸಹಿ ಮಾಡಿಸದಿದ್ದಲ್ಲಿ ನ್ಯಾಯಾಲಯವು ಅದನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲ.

25. ಅಂಥ ಕಾನೂನುಬದ್ಧ ಒಪ್ಪಂದ ಅಥವಾ ರಾಜಿ ಮಾಡಿಕೊಂಡ ನಂತರವೂ ಮತ್ತು ಅದನ್ನು ಲಿಖಿತರೂಪಕ್ಕಿಳಿಸಿ, ಪಕ್ಷಕಾರರ ಸಹಿ ಮಾಡಿಸಿದ್ದರೂ ಸಹ, ಪಕ್ಷಕಾರರಲ್ಲಿ ಒಬ್ಬರು ಅಂಥ ಹೊಂದಾಣಿಕೆಯನ್ನು ನಿರಾಕರಿಸಿದರೆ, ಮತ್ತೊಬ್ಬ ಪಕ್ಷಕಾರನಿಗೆ ಪಕ್ಷಕಾರರಿಂದ ಯುಕ್ತವಾಗಿ ಸಹಿ ಮಾಡಲಾದ ಅಂಥ ಲಿಖಿತ ಪತ್ರವನ್ನು ಹಾಜರುಪಡಿಸಲು ಮತ್ತು ಅಂಥ ಕಾನೂನುಬದ್ಧ ಒಪ್ಪಂದ ಅಥವಾ ರಾಜಿಯನ್ನು ಮಾಡಿಕೊಳ್ಳಲಾಗಿತ್ತೆಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲು ಅವಕಾಶವಿದೆ, ಮತ್ತು ಅಂಥ ಕಾನೂನುಬದ್ಧ ಒಪ್ಪಂದ ಅಥವಾ ರಾಜಿಯನ್ನು ಲಿಖಿತ ರೂಪದಲ್ಲಿ, ಪಕ್ಷಕಾರರಿಂದ ಯುಕ್ತವಾಗಿ ಸಹಿ ಮಾಡಿಸಿದಲ್ಲಿ, ಆಗ ನ್ಯಾಯಾಲಯವು ಅಂಥ ಒಪ್ಪಂದ ಅಥವಾ ರಾಜಿಯನ್ನು ದಾಖಲಿಸಿಕೊಳ್ಳಲು ಆದೇಶಿಸತಕ್ಕದ್ದು ಹಾಗೂ ಅದಕ್ಕನುಸಾರವಾಗಿ ದಾವೆಯ ಪಕ್ಷಕಾರರಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಡಿಕ್ರಿ ಹೊರಡಿಸತಕ್ಕದ್ದು.

26. ಹಾಗಿದ್ದರೂ, ದಾವೆಯ ಸಂಪೂರ್ಣ ಅಥವಾ ಭಾಗಶಃ ವಸ್ತು ವಿಷಯದ ಸಂಬಂಧದಲ್ಲಿ ಪ್ರತಿವಾದಿಯು ವಾದಿಗೆ ಮನವರಿಕೆ ಮಾಡಿಕೊಟ್ಟಲ್ಲಿ, ಅದನ್ನು ಲಿಖಿತ ರೂಪಕ್ಕಿಳಿಸುವ ಹಾಗು ಪಕ್ಷಕಾರರಿಂದ ಸಹಿ ಮಾಡಿಸುವ ಅಗತ್ಯವಿಲ್ಲ. ಅದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅದು ಕ್ಲೇಮಿನ ಹೊಂದಾಣಿಕೆಯ ಪ್ರಕರಣವಲ್ಲ. ಆದರೆ, ಅದು ವಾದಿಯ ಇಡೀ ಕ್ಲೇಮನ್ನು ನೆರವೇರಿಸುವ ಪ್ರಕರಣವಾಗಿದೆ. ಒಮ್ಮೆ ವಾದಿಯ ಕ್ಲೇಮು ಮನವರಿಕೆಯಾದಲ್ಲಿ ಮುಂದೆ ಮಾಡಲು ಏನೂ ಉಳಿದಿರುವುದಿಲ್ಲ. 'ಮನವರಿಕೆ'ಯನ್ನು ಅನುಸರಿಸುವ ಡಿಕ್ರಿಯು, ಡಿಕ್ರಿ ಹೊರಡಿಸುವುದಕ್ಕಿಂತ ಮುಂಚೆಯೇ ಕ್ಲೇಮು ನೆರವೇರಿರುವ ಕಾರಣ, ಅದು ಕಾರ್ಯಗತ ಗೊಳಿಸಬೇಕಾದ ಡಿಕ್ರಿಯಲ್ಲ ಹಾಗೂ ಡಿಕ್ರಿಯು ಅಂಥ ಮನವರಿಕೆಯನ್ನು ದಾಖಲಿಸುತ್ತದಷ್ಟೆ. ಪ್ರತಿವಾದಿಯು ವಾದಿಸಿದ ಮನವರಿಕೆಯನ್ನು ನಿರಾಕರಿಸಿದರೆ, ಆಗ ನ್ಯಾಯಾಲಯವು ಮನವರಿಕೆಯ ಪ್ರಶ್ನೆಯನ್ನು ನಿರ್ಣಯತಕ್ಕದ್ದು. ಅಂಥ

ಹೊಂದಾಣಿಕೆ ಅಥವಾ ಮನವರಿಕೆಯನ್ನು ಅಂಗೀಕರಿಸಬಹುದಾದ ಸಾಕ್ಷ್ಯವನ್ನು ನೀಡುವ ಮೂಲಕ ಸಾಬೀತುಪಡಿಸಿದಲ್ಲಿ ಹಾಗೂ ಪ್ರತಿವಾದಿಯು ವಾದಿಯ ಕ್ಲೇಮನ್ನು ನೆರವೇರಿಸಿದ್ದಾನೆಂದು ನ್ಯಾಯಾಲಯಕ್ಕೆ ಮನವರಿಕೆಯಾದಲ್ಲಿ, ಆಗ ನ್ಯಾಯಾಲಯವು ಅಂಥ ನೆರವೇರಿಕೆಯ ನಿಬಂಧನೆಗಳ ಅನುಸಾರ ಡಿಕ್ರಿ ಹೊರಡಿಸತಕ್ಕದ್ದು.

27. ಲಿಖಿತ ರೂಪಕ್ಕೆ ಇಳಿಸಬೇಕೆಂದು ಮತ್ತು ಪಕ್ಷಕಾರರ ಸಹಿ ಮಾಡಿಸಬೇಕೆಂದು ಮನವರಿಕೆ ಮಾಡಿಕೊಡಲು ಸಹ ಕಾನೂನಿನಡಿ ಯಾವುದೇ ನಿರ್ಬಂಧವಿಲ್ಲ. ಆದರೆ, ಅದನ್ನು ಪಕ್ಷಕಾರರ ವಿವೇಚನೆಗೆ ಬಿಡಲಾಗಿದೆ. ಆದುದರಿಂದ, ದಾವೆಯ ಕ್ಲೇಮಿನ ಹೊಂದಾಣಿಕೆಯನ್ನು ಮನವರಿಕೆ ಮಾಡಿಕೊಡುವ ಮೂಲಕ ಮಾಡಬಹುದು ಮತ್ತು ಅದನ್ನು ಲಿಖಿತ ರೂಪಕ್ಕಿಳಿಸಿ, ಪಕ್ಷಕಾರರಿಂದ ಸಹಿಯನ್ನು ಸಹ ಮಾಡಿಸಬಹುದು. ಆದರೆ, ದಾವೆಯ ಕ್ಲೇಮಿನ ಮನವರಿಕೆಯಾಗದಿದ್ದಲ್ಲಿ ಮತ್ತು ವಾದಿಯ ಕ್ಲೇಮನ್ನು ಹೊಂದಾಣಿಕೆ ಮಾಡಿದ್ದಲ್ಲಿ ಹಾಗೂ ಸದರಿ ಹೊಂದಾಣಿಕೆಯನ್ನು ಲಿಖಿತ ರೂಪಕ್ಕಿಳಿಸಿ, ಪಕ್ಷಕಾರರಿಂದ ಸಹಿ ಮಾಡಿಸಿದಲ್ಲಿ, ಸದರಿ ಒಪ್ಪಂದವು ಕಾನೂನುಬದ್ಧವಾಗಿದೆಯೆಂದು ನ್ಯಾಯಾಲಯಕ್ಕೆ ಮನವರಿಕೆಯಾದಲ್ಲಿ ಮಾತ್ರ, ಅಂಥ ಒಪ್ಪಂದ ಅಥವಾ ರಾಜಿಯನ್ನು ದಾಖಲಿಸಬೇಕೆಂದು ಆದೇಶಿಸತಕ್ಕದ್ದು ಹಾಗೂ ಅದು ಪಕ್ಷಕಾರರಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಅದಕ್ಕನುಸಾರವಾಗಿ ಡಿಕ್ರಿ ಹೊರಡಿಸತಕ್ಕದ್ದು. ಆದುದರಿಂದ, ಸಿವಿಲ್ ಪ್ರಕ್ರಿಯಾ ಸಂಹಿತೆಯ 23ನೇ ಕ್ರಮಾದೇಶದ 3ನೇ ನಿಯಮದ ಸ್ಕೀಮು ವ್ಯಾಜ್ಯೆಯ ಬಹುಮುಖತೆಯನ್ನು (Multiplicity) ತಪ್ಪಿಸಲು ಇರುವುದಾಗಿದೆ ಮತ್ತು ಕಾನೂನು ಬದ್ಧವಾದ ಇತ್ಯರ್ಥಕ್ಕೆ ಬರಲು ಪಕ್ಷಕಾರರಿಗೆ ಅನುಮತಿಸುತ್ತದೆ, ಹಾಗೂ ಅದು ಪಕ್ಷಕಾರರ ಕಡೆಯಿಂದ ಸ್ವಯಿಚ್ಛೆಯ ಕಾರ್ಯವಾಗಿರತಕ್ಕದ್ದು.

28. ದಾವೆಯು ಪಕ್ಷಕಾರನು, ಹೊಂದಾಣಿಕೆ ಅಥವಾ ಮನವರಿಕೆ ಮಾಡಿಕೊಳ್ಳಲಾಗಿದೆಯೆಂದು ಆಪಾದಿಸಿದಲ್ಲಿ ಮತ್ತು ಒಪ್ಪಂದವನ್ನು ದಾಖಲಿಸಲು ಹಾಗೂ ಅದಕ್ಕನುಸಾರವಾಗಿ ಡಿಕ್ರಿ ಹೊರಡಿಸಲು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದಲ್ಲಿ, ವಾದಿಯು ಅದನ್ನು ನಿರಾಕರಿಸದಿದ್ದಲ್ಲಿ, ಅಂಥ ಹೊಂದಾಣಿಕೆ ಅಥವಾ ಮನವರಿಕೆಯನ್ನು

ದಾಖಲಿಸಿ, ಡಿಕ್ರಿ ಹೊರಡಿಸಲಾಗುವುದು. ಆದರೆ, ದಾವೆಯ ಎದುರುಪಕ್ಷಕಾರರು ಒಪ್ಪಂದವನ್ನು ನಿರಾಕರಿಸಿದರೆ, ಅಥವಾ ಅದನ್ನು ರದ್ದುಪಡಿಸಲು ಇಚ್ಛಿಸಿದರೆ, ಆಗ, ಅಂಥ ಹೊಂದಾಣಿಕೆ ಅಥವಾ ಮನವರಿಕೆ ಮಾಡಿಕೊಳ್ಳಲಾಗಿದ್ದಲ್ಲಿ ಅದನ್ನು ನಿರ್ಣಯಿಸುವ ಮತ್ತು ತದನುಸಾರವಾಗಿ, ಎದುರು ಪಕ್ಷಕಾರರ ನಿರಾಸಕ್ತಿಯ ಕಾರಣದಿಂದಾಗಿ ಡಿಕ್ರಿ ಹೊರಡಿಸುವ ಅಧಿಕಾರವನ್ನು ನ್ಯಾಯಾಲಯವು ಹೊಂದಿದೆಯೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

29. ನಿಯಮದಲ್ಲಿ ಕಂಡುಬರುವ "ನ್ಯಾಯಾಲಯದ ಮನವರಿಕೆಗೆ ಸಂಬಂಧಿಸಿದಂತೆ ರುಜುವಾತಾಗಿದ್ದಲ್ಲಿ" ಎಂಬ ಪದಗಳು, ರಾಜಿಯು ಕಾನೂನುಬದ್ಧವಾಗಿ ಆಗಿದೆಯೆ? ಎಂಬುದನ್ನು ವಿಚಾರಣೆ ಮಾಡಲು ನ್ಯಾಯಾಲಯಕ್ಕೆ ಕರ್ತವ್ಯವನ್ನು ವಿಧಿಸುವಷ್ಟು ವಿಸ್ತೃತವಾಗಿವೆ. ವ್ಯಕ್ತ ನಿಬಂಧನೆಗಳಲ್ಲಿ ಪರಂತುಕವು, ಹೊಂದಾಣಿಕೆ ಅಥವಾ ಮನವರಿಕೆ ಮಾಡಿಕೊಳ್ಳುವ ಪಕ್ಷಕಾರರ ಕುರಿತಾದ ವಿವಾದವನ್ನು ನಿರ್ಣಯಿಸಲು ನ್ಯಾಯಾಲಯಕ್ಕೆ ನಿರ್ದೇಶಿಸುತ್ತದೆ. ಆ ರೀತಿ ರಾಜಿ ಮಾಡಿಕೊಂಡಿಲ್ಲವೆಂದು ಅಥವಾ ವಂಚನೆ, ಒತ್ತಾಯ ಅಥವಾ ಅನುಚಿತ ಪ್ರಭಾವದಿಂದ ಅದನ್ನು ನಿರರ್ಥಕಗೊಳಿಸಲಾಗಿದೆಯೆಂದು ಮನವರಿಕೆಯಾಗಿದ್ದರೆ. ಅದು ರಾಜಿಯನ್ನು ತಿರಸ್ಕರಿಸಬೇಕು ಮತ್ತು ದಾವೆಯನ್ನು ಮುಂದುವರೆಸಬೇಕು. ಅದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಪಕ್ಷಕಾರರ ನಡುವೆ ಒಪ್ಪಂದ ಅಥವಾ ರಾಜಿಯನ್ನು ಕಾನೂನುಬದ್ಧವಾಗಿ ಮಾಡಿಕೊಳ್ಳಲಾಗಿದೆಯೆಂದು ಸ್ಪಷ್ಟವಾಗಿ ಸಾಭೀತುಪಡಿಸಿದ ಹೊರತು, ಸಿವಿಲ್ ಪ್ರಕ್ರಿಯಾ ಸಂಹಿತೆಯ 23 ನೇ ಕ್ರಮಾದೇಶದ 3ನೇ ನಿಯಮದ ಅಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸಲಾಗದು.

30. ಆದ್ದರಿಂದ, ಕಾನೂನುಬದ್ಧ ಒಪ್ಪಂದ ಅಥವಾ ರಾಜಿಯನ್ನು ಲಿಖಿತ ರೂಪಕ್ಕಿಳಿಸದಿದ್ದಾಗ ಮತ್ತು ಪಕ್ಷಕಾರರಿಂದ ಸಹಿ ಹಾಕಿಸಿರದಿದ್ದಾಗ ಸಹ, 1976 ರ ಅಧಿನಿಯಮ 104 ರ ಮೂಲಕ ಸಿವಿಲ್ ಪ್ರಕ್ರಿಯಾ ಸಂಹಿತೆಗೆ ಮಾಡಲಾದ ತಿದ್ದುಪಡಿ ಏನೇ ಇದ್ದರೂ, ಆಗಲೂ ನ್ಯಾಯಾಲಯವು ಅಂಥ ಹೊಂದಾಣಿಕೆ ಅಥವಾ ಮನವರಿಕೆಯನ್ನು ದಾಖಲಿಸಲು ಆದೇಶಿಸಬಲ್ಲದು ಹಾಗೂ ದಾವೆಯ ವಸ್ತು ವಿಷಯದ ಸಂಬಂಧದಲ್ಲಿ ಪ್ರತಿವಾದಿಯು ವಾದಿಗೆ ಮನವರಿಕೆ ಮಾಡಿಕೊಟ್ಟಲ್ಲಿ,

ಅದಕ್ಕನುಸಾರವಾಗಿ ಡಿಕ್ರಿ ಹೊರಡಿಸಬಲ್ಲದು. ಈ ಸಂದರ್ಭದಲ್ಲಿಯೇ, ಪಕ್ಷಕಾರರು ಒಪ್ಪಂದ ಅಥವಾ ರಾಜಿಯನ್ನು ಲಿಖಿತ ರೂಪಕ್ಕಿಳಿಸದಿದ್ದಲ್ಲಿ ಮತ್ತು ರಾಜಿ ಅಥವಾ ಒಪ್ಪಂದವನ್ನು ಪಕ್ಷಕಾರರಲ್ಲಿ ಒಬ್ಬರು ಸರಿಯೆಂದು ಹೇಳಿ ಹಾಗೂ ಇನ್ನೊಬ್ಬರು ಅದನ್ನು ಅಲ್ಲಗಳೆದು ವಿವಾದವುಂಟಾದ ಪ್ರಕರಣದಲ್ಲಿ ಮಾತ್ರ ಈ ಪರಂತುಕವು ಮುಖ್ಯ ಪಾತ್ರವಹಿಸುತ್ತದೆ. ಆದ್ದರಿಂದ, 1976 ರ ಅಧಿನಿಯಮ ಸಂಖ್ಯೆ: 104 ರ ಮೂಲಕ ಸೇರ್ಪಡೆಯಾದ ಪರಂತುಕವು ಆ ಪ್ರಶ್ನೆಯನ್ನು ನಿರ್ಣಯಿಸಲು ನ್ಯಾಯಾಲಯಕ್ಕೆ ನಿರ್ದೇಶಿಸುತ್ತದೆ. ಅಷ್ಟೇ ಅಲ್ಲದೆ, ಸದರಿ ಪ್ರಶ್ನೆಯನ್ನು ನಿರ್ಣಯಿಸುವ ಉದ್ದೇಶಕ್ಕಾಗಿ ಯಾವುದೇ ಮುಂದೂಡಿಕೆಯನ್ನು ನೀಡತಕ್ಕದಲ್ಲವೆಂದು ನಿರ್ದೇಶಿಸುತ್ತದೆ.

31. ಮೇಲೆ ಹೇಳಿದ ನಿಯಮವು, ಕಾನೂನುಬದ್ದ ಒಪ್ಪಂದ ಅಥವಾ ರಾಜಿ ಅಥವಾ ಮನವರಿಕೆ ಮಾಡಿಕೊಡಲಾಗಿರುವುದನ್ನು ದಾಖಲಿಸಲು ಮತ್ತು ಅಂಥ ಒಪ್ಪಂದ, ರಾಜಿ ಅಥವಾ ಮನವರಿಕೆಗೆ ಸಂಬಂಧಿಸಿದಂತೆ ಡಿಕ್ರಿ ಹೊರಡಿಸಲು ನ್ಯಾಯಾಲಯಕ್ಕೆ ನಿರ್ದೇಶನ ನೀಡುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 23 ನೇ ಕ್ರಮಾದೇಶದ 3ನೇ ನಿಯಮದ ಉಪಬಂಧಗಳನ್ನು ಅನ್ವಯಿಸಲು ಪೂರೈಸಬೇಕಾದ ಷರತ್ತುಗಳು ಈ ಕೆಳಗಿನಂತಿವೆ:

(ಎ) ಕಾನೂನು ಬದ್ಧವಾದ ಒಪ್ಪಂದ ಅಥವಾ ರಾಜಿ ಮಾಡಿಕೊಂಡಿರತಕ್ಕದ್ದು.

(ಬಿ) ಈ ರಾಜಿ ಲಿಖಿತರೂಪದಲ್ಲಿರಬೇಕು ಮತ್ತು ಪಕ್ಷಕಾರರ ಸಹಿಯನ್ನು ಹೊಂದಿರಬೇಕು.

(ಸಿ) ಈ ರಾಜಿಯನ್ನು ನ್ಯಾಯಾಲಯವು ದಾಖಲಿಸಬೇಕು.

(ಡಿ) ಪಕ್ಷಕಾರರು ಪತ್ರಕ್ಕೆ ಸಹಿ ಮಾಡುವ ಅಗತ್ಯವಿಲ್ಲದ ಸಂದರ್ಭದಲ್ಲಿ, ವಸ್ತು ವಿಷಯದ ಸಂಪೂರ್ಣ ಅಥವಾ ಯಾವುದೇ ಭಾಗದ ಸಂಬಂಧದಲ್ಲಿ ಪ್ರತಿವಾದಿಯು ವಾದಿಗೆ ಮನವರಿಕೆ ಮಾಡಿಕೊಡತಕ್ಕದ್ದು.

(ಇ) ದಾವೆಯ ಪಕ್ಷಕಾರರಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಅಂಥ ಒಪ್ಪಂದ, ರಾಜಿ ಅಥವಾ ಮನವರಿಕೆಗೆ ಸಂಬಂಧಿಸಿದಂತೆ ಡಿಕ್ರಿ ಹೊರಡಿಸಬಹುದು. ಆದರೆ, ದಾವೆಯ ವಸ್ತು ವಿಷಯವಾಗಿರದ ವಿಶೇಷವಾದ ವಿಷಯಕ್ಕೆ ಅದು ವಿಸ್ತರಿಸಬಹುದು.

32. ವಾಸ್ತವವಾಗಿ, ***ಗುರ್‌ಪ್ರೀತ್ ಸಿಂಗ್ –ವಿರುದ್ಧ– ಚತುರ್ ಭುಜ್ ಗೋಯಲ್*** [1] ಪ್ರಕರಣದಲ್ಲಿ, ಈ ಅಂಶವನ್ನು ಪರಿಗಣಿಸುವ ಸಂದರ್ಭವು ಸರ್ವೋಚ್ಚ ನ್ಯಾಯಾಲಯಕ್ಕೆ ಒದಗಿಬಂದಿತ್ತು ಅದರಲ್ಲಿ ಈ ಮುಂದಿನಂತೆ ತೀರ್ಮಾನಿಸಲಾಗಿದೆ:

> *"ನೆರವೇರಿಕೆ" ಎಂಬ ಪದವು ವಾದಿಯ ಕ್ಲೇಮಿನ ಸಂಪೂರ್ಣ ಅಥವಾ ಭಾಗಶಃ ನೆರವೇರಿಕೆ? ಯನ್ನು ಸೂಚಿಸುತ್ತದೆ ಮತ್ತು ಇದಕ್ಕಾಗಿ ಪಕ್ಷಕಾರರಿಂದ ಸಹಿ ಮಾಡಲ್ಪಟ್ಟ ಲಿಖಿತ ರೂಪದ ಒಪ್ಪಂದ ಪತ್ರವಿರಬೇಕಿಲ್ಲ ಬ್ಯಾಂಕಿನ ಮುಖಾಂತರ ಅಥವಾ ಬೇರಾವುದೇ ರೀತಿಯಲ್ಲಿ ರಸೀದಿ ಅಥವಾ ಪಾವತಿಯನ್ನು ಹಾಜರುಪಡಿಸುವಿಕೆಯಿಂದ ಅಂಥ ನೆರವೇರಿಕೆಯನ್ನು ಸಾಬೀತುಪಡಿಸಲು ಪ್ರತಿವಾದಿಗೆ ಅವಕಾಶವಿದೆ. ಕ್ಲೇಮಿನ ನೆರವೇರಿಕೆಯನ್ನು ಸಾಕ್ಷ್ಯ ನೀಡುವ ಮೂಲಕವೂ ಸಹ ಸಾಬೀತುಪಡಿಸಬಹುದು, ವಾಸ್ತವವಾಗಿ, ಕ್ಲೇಮಿನ ಅಂಥ ನೆರವೇರಿಕೆ ಆಗಿದೆಯೇ? ಮತ್ತು ಸಂಹಿತೆಯ 3 ನೇ ನಿಯಮದ 23 ನೇ ಆದೇಶದ ಅನುಸಾರವಾಗಿ ಡಿಕ್ರಿ ಹೊರಡಿಸಲಾಗಿದೆಯೇ? ಎಂಬ ಬಗ್ಗೆ ಸಾಕ್ಷ್ಯ ತೆಗೆದುಕೊಳ್ಳುವುದರ ಮೇಲೆ ಅಥವಾ ಅಫಿಡವಿಟ್ಟುಗಳ ಮೂಲಕ ಪ್ರಶ್ನೆಯನ್ನು ನಿರ್ಣಯಿಸುವುದು ನ್ಯಾಯಾಲಯಕ್ಕೆ ಸೇರಿದೆ.*

---

1. ಎಐಆರ್ 1988 ಎಸ್‌ಸಿ 400

**೨ ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ತೀರ್ಮಾನಿಸಲಾಗಿದೆ:**

*"ತಿದ್ದುಪಡಿಯಾಗುವ ಮುನ್ನ ನಿಯಮದ ಮೇರೆಗೆ, ದಾವೆಯನ್ನು ರಾಜಿಗೊಳಿಸುವ ಒಪ್ಪಂದವು ಲಿಖಿತ ರೂಪದಲ್ಲಿರಬಹುದು ಅಥವಾ ಮೌಖಿಕವಾಗಿರಬಹುದು ಹಾಗೂ ಅಂಥ 'ರಾಜಿ' ಯು ಪರಿಣಾಮಕಾರಿ ಯಾಗಿದೆಯೆ? ಅಥವಾ ಇಲ್ಲವೇ? ಎಂಬುದನ್ನು ನ್ಯಾಯಾಲಯವು ಅಗತ್ಯವಾಗಿ ವಿಚಾರಿಸಬೇಕಿತ್ತು. ಎಂದಿನಂತೆ ಅಥವಾ ಅಫಿಡವಿಟ್ ಆಧಾರದ ಮೇಲೆ ಸಾಕ್ಷ್ಯವನ್ನು ತೆಗೆದುಕೊಳ್ಳುವ ಮೂಲಕ ವಿಷಯುವನ್ನು ನಿರ್ಣಯಿಸಲು ನ್ಯಾಯಾಲಯಕ್ಕೆ ಮುಕ್ತ ಅವಕಾಶವಿತ್ತು. ಲಿಖಿತದಲ್ಲಿ ಮತ್ತು ಪಕ್ಷಕಾರರ ಸಹಿಯೊಂದಿಗೆ' ಎಂಬ ಪದಗಳನ್ನು ಸೇರಿಸುವ ಮೂಲಕ ತಿದ್ದುಪಡಿ ಮಾಡುವುದರ ಸಂಪೂರ್ಣ ಉದ್ದೇಶವು, ದಾವೆಯಲ್ಲಿ ವ್ಯವಹರಣೆಗಳನ್ನು ವೃಥಾ ಬೆಳೆಸುವ ಅಥವಾ ವಿಳಂಬ ಮಾಡುವ ದೃಷ್ಟಿಯಿಂದ ಯಾವುದೇ ಕಾನೂನುಬದ್ಧ ಒಪ್ಪಂದ ಅಥವಾ ರಾಜಿಯ ಮೂಲಕ ದಾವೆಯನ್ನು ಸಂಪೂರ್ಣ ಅಥವಾ ಭಾಗಶಃ ಹೊಂದಾಣಿಕೆ ಮಾಡಲಾಯಿತು ಎಂಬ ಸುಳ್ಳು ಮತ್ತು ಕ್ಷುಲಕ ವಾದಗಳನ್ನು ತಡೆಯುವುದಾಗಿದೆ".*

33. ಈ ಕಾನೂನು ಸ್ಥಿತಿಯ ಹಿನ್ನೆಲೆಯಲ್ಲಿ, ಈ ದಾವೆಯನ್ನು ಪರಿಶೀಲಿಸಿದಾಗ, ಪಕ್ಷಕಾರರು ರಾಜಿ ಒಪ್ಪಂದವನ್ನು ಮಾಡಿಕೊಂಡಿದ್ದರೂ, ಅದನ್ನು ಲಿಖಿತರೂಪಕ್ಕಿಳಿಸಿರುವುದಿಲ್ಲ ಮತ್ತು ಪಕ್ಷಕಾರರ ಸಹಿಗಳನ್ನು ಅದು ಹೊಂದಿರುವುದಿಲ್ಲ. ಇನ್ನೊಂದು ಕಡೆ ಒಪ್ಪಂದ ಮಾಡಿಕೊಂಡ ನಂತರ ವಾದಿಯು ಸರ್ಕಾರದ ನಿರ್ದೇಶನಗಳ ಅನುಸಾರ, ದಾಖಲೆಗಳ ವಾಪಸಾತಿಯನ್ನು ಸಾಧ್ಯಗೊಳಿಸಲಾಗುವಂತೆ, 87.22 ಲಕ್ಷ ರೂ. ಗಳ ಮೊತ್ತವನ್ನು ಒಂದೇ ಇಡಿಗಂಟಾಗಿ ಪಾವತಿಸಲು ಎರಡನೇ ಪ್ರತಿವಾದಿಯನ್ನು ಆಹ್ವಾನಿಸಿ, ನಿಶಾನೆ ಡಿ.3ರ ಪ್ರಕಾರ ಪತ್ರವನ್ನು ಕಳಹಿಸಿದೆ. ಸದರಿ ಪತ್ರವನ್ನು ಸ್ವೀಕರಿಸಿದ ಮೇಲೆ, ಎರಡನೇ ಪ್ರತಿವಾದಿಯು, ಅಂಥ ಪಾವತಿಯನ್ನು ಮಾಡುವ ಅಗತ್ಯತೆಯನ್ನು ಬ್ಯಾಂಕಿನ ಗಮನಕ್ಕೆ ತಂದಿದೆ. ತದನುಸಾರವಾಗಿ ಮೊದಲನೇ ಪ್ರತಿವಾದಿ ಬ್ಯಾಂಕು ಎರಡನೇ ಪ್ರತಿವಾದಿಯ

ಬಾಕಿಗಳ ಸಂಪೂರ್ಣ ಮತ್ತು ಅಂತಿಮ ಇತ್ಯರ್ಥಕ್ಕಾಗಿ ವಾದಿಗೆ ಪಾವತಿ ಆದೇಶ ಸಂಖ್ಯೆ. 464798 ದಿನಾಂಕ: 26/11/2004 ರ ಪಾವತಿ ಆದೇಶದ ಮುಖಾಂತರ 87.22 ಲಕ್ಷ ರೂ. ಗಳನ್ನು ಪಾವತಿಸಿದೆ. ನಿಶಾನೆ ಡಿ.1 ರಿಂದ ವಾದಿಯು ಪತ್ರ ಮತ್ತು ಪಾವತಿ ಆದೇಶವನ್ನು ಸ್ವೀಕರಿಸಿದೆ ಹಾಗೂ ಸ್ವಾಮ್ಯದ ದಸ್ತಾವೇಜುಗಳನ್ನು ಬ್ಯಾಂಕಿನ ವಶಕ್ಕೆ ತ್ವರಿತವಾಗಿ ಒಪ್ಪಿಸಿದೆ. ಹೀಗಾಗಿ, ಅಸಲು ಮತ್ತು ಬಡ್ಡಿಯನ್ನು ಒಳಗೊಂಡಿರುವ ಕೊನೆಯ ಕಂತನ್ನು ಪ್ರತಿನಿಧಿಸುವ ಒಪ್ಪಿತ ಮೊಬಲಗನ್ನು ಪೂರ್ಣ ಹಾಗೂ ಅಂತಿಮ ಇತ್ಯರ್ಥಕ್ಕಾಗಿ ಪಾವತಿಲಾಯಿತು. ಆದ್ದರಿಂದ, ಪ್ರತಿವಾದಿಗಳು ನಿಶಾನೆ ಪಿ. 3 ರಲ್ಲಿ ಒಪ್ಪಿತವಾದಂತೆ, ದಾವೆಯ ಇಡೀ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ, ಎಂದರೆ, ದಾವೆಯ ಕ್ಲೇಮಿಗೆ ಸಂಬಂಧಿಸಿದಂತೆ, ವಾದಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ವಾದಿಯು ವಾಸ್ತವವಾಗಿ, ಎಲ್ಲಾ ಯುಕ್ತತೆಯಲ್ಲಿ, ಡಿಸೆಂಬರ್ 26, 2005 ರಂದು ಮೇಲೆ ಹೇಳಿದ ಮೊತ್ತದ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ವರದಿ ಮಾಡಬೇಕಿತ್ತು ಮತ್ತು ದಾವೆಯನ್ನು ಆ ಕೂಡಲೇ ಹಿಂತೆಗೆದುಕೊಳ್ಳಬೇಕಿತ್ತು. ಆದರೆ, ಅದನ್ನು ಮಾಡಿರುವುದಿಲ್ಲ. ದಿನಾಂಕ 23/05/2008 ರಂದು ನಿಶಾನೆ ಪಿ. 34 ನ್ನು ನೀಡಿದ ನಂತರ ಮಾತ್ರವೇ, ಪಾವತಿಯಾದ ಸುಮಾರು ಮೂರು ವರ್ಷಗಳ ನಂತರ, ಶೈತ್ಯಾಗಾರದಲ್ಲಿ ಇಟ್ಟಿದ್ದ ದಾವೆಯನ್ನು ಮುಂದುವರೆಸಲು ಕೋರಲಾಯಿತು.

34. ಪ್ರತಿವಾದಿಗಳು ತಿದ್ದುಪಡಿಗಾಗಿ ಅರ್ಜಿ ಸಲ್ಲಿಸಿ, ಲಿಖಿತ ಹೇಳಿಕೆಯಲ್ಲಿ ಈ ಎಲ್ಲಾ ಸಂಗತಿಗಳನ್ನು ಸೇರಿಸಿದ್ದಾರೆ ಮತ್ತು ಅದನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ. ನಿಶಾನೆ ಪಿ. 34 ರ ದೃಷ್ಟಿಯಿಂದ, ಮೇಲೆ ಹೇಳಿದ ''ರಾಜಿ''ಯು ಸಿಂಧುವಾಗಿಲ್ಲ ಮತ್ತು ದಾವೆಯನ್ನು ಗುಣಾರ್ಹತೆಗಳ ಆಧಾರದ ಮೇಲೆ ನಿರ್ಣಯಿಸಬೇಕಿದೆಯೆಂಬುದೇ ವಾದಿಯ ವಾದವಾಗಿದೆ. ಸದರಿ ವಾದದಲ್ಲಿ ಯಾವುದೇ ಹುರುಳಿಲ್ಲ. ನಿಶಾನೆ ಪಿ. 33 ಕ್ಕೆ ಸಂಬಂಧಿಸಿದಂತೆ ವಿವಾದ ನಿರ್ಣಯದ ಮೂರು ವರ್ಷಗಳ ನಂತರ ನಿಶಾನೆ ಪಿ. 34 ಅಸ್ತಿತ್ವಕ್ಕೆ ಬಂದಿದೆ. ಎಲ್ಲಾ ಪ್ರಾಯೋಗಿಕ ಉದ್ದೇಶಗಳಿಗಾಗಿ, ದಾವೆಯ ಕ್ಲೇಮಿನ ಮನವರಿಕೆಗಾಗಿ ಮೊತ್ತದ ಪಾವತಿಯ ಮೇಲೆ 2005 ರಲ್ಲಿ ದಾವೆಯನ್ನು ವಜಾ ಮಾಡಲೇಬೇಕಾಯಿತು. ಸದರಿ ಸಂಗತಿಯನ್ನು ಪಕ್ಷಕಾರರು ಆ ಕೂಡಲೇ ನ್ಯಾಯಾಲಯದ ಗಮನಕ್ಕೆ

ತರಲಿಲ್ಲವೆಂಬ ಕಾರಣ ಮಾತ್ರದಿಂದ ಮತ್ತು ಅದೇ ಸಮಯದಲ್ಲಿ ನಿಶಾನೆ ಪಿ. 34 ಅಸ್ತಿತ್ವಕ್ಕೆ ಬಂದಿತೆಂಬ ಕಾರಣಕ್ಕೆ ದಾವೆಯನ್ನು ನಡೆಸಲು ಯಾವುದೇ ಸಮರ್ಥನೆಯಿಲ್ಲ. ಸಿವಿಲ್ ಪ್ರಕ್ರಿಯಾ ಸಂಹಿತೆಯ 3 ನೇ ನಿಯಮದ 23 ನೇ ಆದೇಶದ ದೃಷ್ಟಿಯಿಂದ, ಪ್ರತಿವಾದಿಯು, ವಾದಿಯ ಇಡೀ ಕ್ಲೇಮನ್ನು ಮನದಟ್ಟು ಮಾಡಿಕೊಂಡು ನಿರ್ವಹಿಸಿದಾಗ ಮತ್ತು ಸದರಿ ಸಂಗತಿಯು ದಸ್ತಾವೇಜೀಯ ಸಾಕ್ಷ್ಯದಿಂದ ಸ್ಪಷ್ಟವಾಗಿ ಸಾಬೀತಾದಾಗ, ಹಾಗೂ ಸದರಿ ದಸ್ತಾವೇಜು ಪಕ್ಷಕಾರದಿಂದ ನಿರ್ವಿವಾದವಾಗಿದ್ದಾಗ, ಅಧಿವಿಚಾರಣಾ ನ್ಯಾಯಾಲಯವು ಸದರಿ 'ರಾಜಿ'ಯನ್ನು ಗಮನಕ್ಕೆ ತೆಗೆದುಕೊಳ್ಳಲು ಮತ್ತು ದಾವೆಯನ್ನು ವಜಾಗೊಳಿಸಲು ಬದ್ಧವಾಗಿರುತ್ತದೆ ಅಧಿವಿಚಾರಣಾ ನ್ಯಾಯಾಲಯವು ಮಾಡಿರುವುದು ಖಚಿತವಾಗಿ ಅದೇ ಆಗಿದೆ. ಆದುದರಿಂದ ಸದರಿ ಆದೇಶದಲ್ಲಿ ನಮಗೆ ಯಾವುದೇ ನ್ಯೂನತೆ ಕಂಡು ಬಂದಿಲ್ಲ.

35. ವಾದಿಯ ಇಡೀ ಕ್ಲೇಮು ನಮಗೆ ಮನದಟ್ಟಾಗಿದೆಯೆಂದು ನಾವು ತೀರ್ಮಾನಿಸಿರುವಾಗ, ಕಾಲಪರಿಮಿತಿಯ ಪ್ರಶ್ನೆಯು ಕ್ಷುಲ್ಲಕವಾಗಿ ಪರಿಣಮಿಸುತ್ತದೆ. ಹಾಗಿಲ್ಲದಿದ್ದರೂ, ಈ ವಿವಾದಕ್ಕೆ ಸಂಬಂಧಿಸಿ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಆದೇಶದಲ್ಲಿ ನಮಗೆ ಯಾವುದೇ ನ್ಯೂನತೆ ಕಂಡುಬಂದಿಲ್ಲ. ಈ ಅಪೀಲಿನಲ್ಲಿ ಯಾವುದೇ ಗುಣಾರ್ಹತೆಯಿಲ್ಲ. ಆದ್ದರಿಂದ ಸದರಿ ಅಪೀಲನ್ನು ವಜಾ ಮಾಡಲಾಗಿದೆ.